# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಫೆಬ್ರವರಿ 23, 2022

ಸಂಪುಟ : 48 ಸಂಚಿಕೆ : 284 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


## ಹಿಜಾಬ್ ವಿಷಯ ಸಂವಿಧಾನದ 25ನೇ ವಿಧಿಗೆ ಸೇರದು

### ಶಾಲಾ ಕೋಣೆಗಳಲ್ಲಿ ಮಾತ್ರ ಹಿಜಾಬ್‌ಗೆ ನಿರ್ಬಂಧವಿದೆ ಎಂದು ಹೈಕೋರ್ಟ್ ಎದುರು ರಾಜ್ಯ ಸರ್ಕಾರದ ವಾದ

ಬೆಂಗಳೂರು, ಫೆ. 22 – ಶಿಕ್ಷಣ ಸಂಸ್ಥೆಗಳ ಸಕಾರಣವಾದ ಶಿಸ್ತಿಗೆ ಒಳಪಟ್ಟು ಹಿಜಾಬ್ ಧರಿಸುವುದಕ್ಕೆ ಯಾವುದೇ ನಿರ್ಬಂಧವಿಲ್ಲ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಉಡುಪಿಯ ಮುಸ್ಲಿಂ ವಿದ್ಯಾರ್ಥಿನಿಯರು ಶಾಲಾ ಕೋಣೆಗಳಲ್ಲಿ ಹಿಜಾಬ್ ಧರಿಸುವುದಕ್ಕೆ ವಿಧಿಸಿರುವ ನಿರ್ಬಂಧ ಪ್ರಶ್ನಿಸಿ ದಾಖಲಿಸಿರುವ ಅರ್ಜಿಯ ವಿಚಾರಣೆ ನಡೆಸುತ್ತಿರುವ ಹೈಕೋರ್ಟ್ ಎದುರು ವಾದ ಮಂಡಿಸಿರುವ ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ, ಹಿಜಾಬ್ ವಿಷಯ ಸಂವಿಧಾನದ 19 (1)(ಎ) ವಿಧಿಯಡಿ ಬರುತ್ತದೆ. ಇದು ಅರ್ಜಿದಾರರು ವಾದಿಸುತ್ತಿರುವಂತೆ 25ನೇ ವಿಧಿಯಡಿ ಬರುವುದಿಲ್ಲ ಎಂದಿದ್ದಾರೆ.

ಶಿಕ್ಷಣ ಸಂಸ್ಥೆಗಳ ಶಿಸ್ತಿಗೆ ಒಳಪಟ್ಟು ಯಾರಾದರೂ ಹಿಜಾಬ್ ಧರಿಸಲು ಬಯಸಿದರೆ ಅದಕ್ಕೆ ಯಾವುದೇ ನಿರ್ಬಂಧವಿಲ್ಲ. ಈ ವಿಷಯ ಸಂವಿಧಾದನ 19 (1)(ಎ) ವಿಧಿಯಡಿ ಬರುತ್ತದೆ ಎಂದು ನಾವದಗಿ ಹೇಳಿದ್ದಾರೆ.

ಸಂವಿಧಾನದ 19 (1)(ಎ) ಹಾಗೂ 19 (2) ವಿಧಿಗಳ ಅನ್ವಯ ಶಿಕ್ಷಣ ಸಂಸ್ಥೆಗಳು ಸಕಾರಣವಾದ ನಿರ್ಬಂಧಗಳನ್ನು ಹೇರಬಹುದು ಎಂದು ನಾವದಗಿ ಹೈಕೋರ್ಟ್ ಪೂರ್ಣ ಪೀಠದ ಎದುರು ತಿಳಿಸಿದ್ದಾರೆ. ಶಾಲಾ (2ನೇ ಪುಟಕ್ಕೆ)

## ಆರ್.ಟಿ.ಇ. : ದೇಶಾದ್ಯಂತ ಏಕರೂಪದ ಪಠ್ಯಕ್ಕೆ ಅರ್ಜಿ

### ಕೇಂದ್ರದಿಂದ ಉತ್ತರ ಕೇಳಿದ ಹೈ ಕೋರ್ಟ್

ಬೆಂಗಳೂರು, ಜ. 25 – ಶಿಕ್ಷಣ ಹಕ್ಕು ಕಾಯ್ದೆ, 2009ರ (ಆರ್.ಟಿ.ಇ.) ಕೆಲ ಅಂಶಗಳು ಅತಾರ್ಕಿಕವಾಗಿವೆ ಎಂದು ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಲಾಗಿದ್ದು, ದೇಶಾದ್ಯಂತ ಇರುವ ಮಕ್ಕಳಿಗೆ ಒಂದೇ ರೀತಿಯ ಪಠ್ಯ ರೂಪಿಸುವಂತೆ ಕೋರಲಾಗಿದೆ. ಅರ್ಜಿಯನ್ನು ದಾಖಲಿಸಿಕೊಂಡಿರುವ ಹೈಕೋರ್ಟ್, ಕೇಂದ್ರ ಸರ್ಕಾರದಿಂದ ಉತ್ತರ ಕೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಟೇಲ್ ಹಾಗೂ ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರನ್ನು ಒಳಗೊಂಡ ಪೀಠ ವಿಚಾರಣೆ ನಡೆಸುತ್ತಿದ್ದು, ಕೇಂದ್ರ ಶಿಕ್ಷಣ ಸಚಿವಾಲಯ, ಕಾನೂನು ಮತ್ತು ಗೃಹ ಸಚಿವಾಲಯಗಳಿಗೆ ನೋಟಿಸ್ ಕಳಿಸಿದೆ. ಅರ್ಜಿಯ ವಿಚಾರಣೆಯನ್ನು ಮಾರ್ಚ್ 30ಕ್ಕೆ ನಿಗದಿ ಪಡಿಸಲಾಗಿದೆ.

ಶಿಕ್ಷಣ ಹಕ್ಕು ಕಾಯ್ದೆಯ ಸೆಕ್ಷನ್ 1(4) ಹಾಗೂ 1 (5)ಗಳಲ್ಲಿ ಏಕರೂಪದ ಪಠ್ಯವಿಲ್ಲ. ಏಕರೂಪದ ಶಿಕ್ಷಣ ವ್ಯವಸ್ಥೆ (2ನೇ ಪುಟಕ್ಕೆ)

## ಹರ್ಷ ಹತ್ಯೆ ಪ್ರಕರಣ: 12 ಜನರ ಬಂಧನ

ಶಿವಮೊಗ್ಗ, ಫೆ. 22- ಭಜರಂಗ ದಳದ ಕಾರ್ಯಕರ್ತ ಹರ್ಷ ಹತ್ಯೆಗೆ ಸಂಬಂಧಿಸಿದಂತೆ ಆರು ಜನರನ್ನು ಬಂಧಿಸಲಾಗಿದೆ ಹಾಗೂ 12 ಜನರನ್ನು ವಶಕ್ಕೆ ತೆಗೆದುಕೊಂಡು ಪ್ರಶ್ನಿಸಲಾಗಿದೆ. ಈ ನಡುವೆ, ಶಿವಮೊಗ್ಗದ ತುಂಗಾ ನಗರದಲ್ಲಿ ಬೆಳಿಗ್ಗೆ ದೊಂಬಿ ಹಾಗೂ ಹಿಂಸಾಚಾರದ ಘಟನೆಗಳು ನಡೆದಿವೆ. ಪತ್ರಕರ್ತರೊಂದಿಗೆ ಮಾತನಾಡಿರುವ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಂ.ಲಕ್ಷ್ಮಿ ಪ್ರಸಾದ್ ಅವರು ಈ ಬಗ್ಗೆ ವಿವರ ನೀಡಿದ್ದು, ಮೊಹಮ್ಮದ್ ಕಾಶಿಫ್, ಸೈಯದ್ ನದೀಮ್, (2ನೇ ಪುಟಕ್ಕೆ)

## ನಟ ಚೇತನ್ ಪೊಲೀಸ್ ವಶಕ್ಕೆ: ಅಪಹರಣವೆಂದ ಪತ್ನಿ

ಬೆಂಗಳೂರು, ಫೆ.22- ನ್ಯಾಯಾಂಗ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ಚೇತನ್ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಇದೊಂದು ಅಪಹರಣವೆಂದು ಚೇತನ್ ಪತ್ನಿ ಮೇಘಾ ಆರೋಪಿಸಿದ್ದಾರೆ.

ನ್ಯಾಯಾಂಗ ನಿಂದನೆ ಮಾಡಿರುವ ಆರೋಪದ ಹಿನ್ನೆಲೆಯಲ್ಲಿ ಚೇತನ್ ಕುಮಾರ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿರುವುದಾಗಿ ಸೆಂಟ್ರಲ್ ವಿಭಾಗದ ಡಿಸಿಪಿ ತಿಳಿಸಿದ್ದಾರೆ.

ಏತನ್ಮಧ್ಯೆ ಇದೊಂದು ಅಪಹರಣವೆಂದು ಚೇತನ್ ಪತ್ನಿ ಮೇಘಾ ಆರೋಪಿಸಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಚೇತನ್ ಅವರನ್ನು ಮನೆಯಿಂದ ವಶಕ್ಕೆ ಪಡೆದಿರುವ (2ನೇ ಪುಟಕ್ಕೆ)









## ಶಿರಮಗೊಂಡನಹಳ್ಳಿ ದೊಡ್ಡಹಾಲಪ್ಪ ಮೀನಾಕ್ಷಮ್ಮ ನಿಧನ



ದಾವಣಗೆರೆ ತಾಲ್ಲೂಕು ಶಿರಮಗೊಂಡನಹಳ್ಳಿ ಗ್ರಾಮದ ವಾಸಿ
ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎಸ್.ಎ. ರವೀಂದ್ರನಾಥ್ ಇವರ ಅಕ್ಕನವರೂ
ಮತ್ತು ಡಿ.ಎಂ. ವೀರೇಂದ್ರಪಾಟೀಲ್ ಇವರ ತಾಯಿ ಹಾಗೂ
ದಿ|| ಎಸ್.ಡಿ. ಮಹೇಶ್ವರಪ್ಪ ಇವರ ಧರ್ಮಪತ್ನಿ

### ದೊಡ್ಡಹಾಲಪ್ಪ ಶ್ರೀಮತಿ ಮೀನಾಕ್ಷಮ್ಮ

ಇವರು ದಿನಾಂಕ 22.02.2022ರ ಮಂಗಳವಾರ ಮಧ್ಯಾಹ್ನ 1.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.02.2022ರ ಬುಧವಾರ ಮಧ್ಯಾಹ್ನ 12.30ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಶಿರಮಗೊಂಡನಹಳ್ಳಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು**

ಶ್ರೀಮತಿ ರತ್ನಮ್ಮ ಮತ್ತು ಶ್ರೀ ಎಸ್.ಎ. ರವೀಂದ್ರನಾಥ್, ಶಾಸಕರು
ಮತ್ತು ಸಹೋದರರರು ಹಾಗೂ ಅಜ್ಜಪ್ಪ ವಂಶಸ್ಥರು, ಶಿರಮಗೊಂಡನಹಳ್ಳಿ.
ಶ್ರೀಮತಿ ಸುಧಾ ವೀರೇಂದ್ರ ಪಾಟೀಲ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರು
ಡಿ.ಎಂ. ವೀರೇಂದ್ರ ಪಾಟೀಲ್ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ
ದೊಡ್ಡಹಾಲಪ್ಪ ವಂಶಸ್ಥರು ಶಿರಮಗೊಂಡನಹಳ್ಳಿ
ಮೊ: 94496 49650

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟುಗಳು ಮಾರಾಟಕ್ಕಿವೆ**
J.H. ಪಟೇಲ್ ಬಡಾವಣೆಯಲ್ಲಿ 20x30 ಪೂರ್ವ, ಶಿವ ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ, ಬಾಲಾಜಿ ನಗರದಲ್ಲಿ 30x50 ಪೂರ್ವ.
ಸ್ವಾಮಿ ಏಜೆಂಟ್ (ವಿದ್ಯಾನಗರ)
97421 44715

**ಮಾರಾಟಕ್ಕೆ/ಖರೀದಿಗೆ ವಿಚಾರಿಸಿರಿ**
ಪಿ.ಜೆ. ಬಡಾವಣೆ, 27x69 ಮನೆ, 30x38 ಕೆಳಗೆ ಎರಡು ಮನೆ, ಒಂದನೇ ಮಹಡಿಯಲ್ಲಿ ಒಂದು ಮನೆ, ಎರಡನೇ ಮಹಡಿಯಲ್ಲಿ ಎರಡು ರೂಂ. 30x80 ಪಶ್ಚಿಮಕ್ಕೆ ಸೈಟ್.
ಸುರೇಶ್ 95911 60520

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಪುರುಷ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಆಫೀಸ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ**
ಆಸಕ್ತಿವುಳ್ಳವರು ಸಂಪರ್ಕಿಸಿ
ಸಂಪರ್ಕಿಸುವ ಸಮಯ :
ಬೆಳಿಗ್ಗೆ 11.00 ರಿಂದ 5.30ರವರೆಗೆ
ಫೋ.: 08192 254736

**ಸೈಟುಗಳು ಮಾರಾಟಕ್ಕಿವೆ**
30x50 South ಅಕ್ಕಪಕ್ಕ 120 ಅಡಿ ರೋಡ್‌ಗಿದೆ. 30X40 west, 30x57 east, 40 ಅಡಿ ರೋಡ್‌ಗಿದೆ. 30x50 west ಹೊಸ ಬನಶಂಕರಿ ಲೇಔಟ್‌ನಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ರೂಮ್ಸ್ ಬಾಡಿಗೆಗೆ ಇವೆ**
ದಾವಣಗೆರೆ ನಗರದ ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ಪ್ರತ್ಯೇಕ ಅಟ್ಯಾಚ್ ಬಾತ್ ರೂಂವುಳ್ಳ ಮೂರು ರೂಂಗಳು ಬಾಡಿಗೆಗೆ ಇವೆ. (Only For Ladies) ಸಂಪರ್ಕಿಸಿ
97427 67274, 93538 97342

**ಸೈಟು ಬೇಕಾಗಿದೆ**
P.B. ರಸ್ತೆಯ ಪೈಲ್ವಾನ್ ಚನ್ನಬಸಪ್ಪ ನಗರದಲ್ಲಿ 30x40 ಅಳತೆಯ ಸೈಟು ಮಾರಾಟಕ್ಕೆ/ಖರೀದಿಗೆ ಬೇಕಾಗಿದೆ. ಆಸಕ್ತರು ಸಂಪರ್ಕಿಸಿ.
98808 47776

**ಕರ್ನಾಟಕ ಗೃಹಮಂಡಳಿಯಲ್ಲಿ ಮನೆಗಳು ಮಾರಾಟಕ್ಕಿವೆ**
30x50 east ಮನೆ, 30x40 North ಮನೆ, 40x60 east, 40x60 west, 40x60 south, 30x50 east , 30x40 south
ಐನಳ್ಳಿ ಚನ್ನಬಸಪ್ಪ ಏಜೆಂಟ್
9916612110

**Hiring**
Business development executive .ON ROLL
Open Market ( PD Channel )
Age limit below 30, Ladies & Gents, Full time
90357 12217

**ಬೇಕಾಗಿದ್ದಾರೆ**
ಮಹಿಳಾ ಜವಾನರು ಬೇಕಾಗಿದ್ದಾರೆ. ಆಯ್ಕೆಯಾದ ಅಭ್ಯರ್ಥಿಯ ಮಗುವಿಗೆ ಉಚಿತ ಶಿಕ್ಷಣ ಹಾಗೂ ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ :
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ
ಕೊಂಡಜ್ಜಿ ರಸ್ತೆ, ಹೊಸ ಆರ್‌ಟಿಓ ಕಛೇರಿ ಹಿಂಭಾಗ, ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, ದಾವಣಗೆರೆ.
ಮೊ.99640 17729

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಎಸ್.ಎಸ್.ಎಲ್.ಸಿ. ಪಾಸ್ / ಫೇಲಾದವರು ಸಂಪರ್ಕಿಸಿ :
ಶ್ರೀ ಧನಲಕ್ಷ್ಮಿ ಸ್ಟೋರ್ಸ್
298/2, ಚಾಮರಾಜಪೇಟೆ, ಆಶಾದೀಪ್ ಎದುರು, ದಾವಣಗೆರೆ -1

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಏಜೆನ್ಸಿಗೆ ಫೀಲ್ಡ್ ಎಕ್ಸಿಕ್ಯೂಟಿವ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: ಯಾವುದೇ ಪದವಿ
ಸೇವಾನುಭವ 2-3 ವರ್ಷಗಳು
ವಯಸ್ಸು 25 -35ವರ್ಷಗಳು
Email: srvassociate15@gmail.com
73539 50027, 94499 18575

**ಉತ್ತಮ ಗುಣಮಟ್ಟದ ಅಡಿಕೆ ಗೋಟು ಮತ್ತು ಅಡಿಕೆ ಮೊಳಕೆ ಬೀಜಗಳು ದೊರೆಯುತ್ತವೆ**
5 ಕೆಜಿ ಪ್ಯಾಕೆಟ್ ಸಸಿಗಳು ಲಭ್ಯ
ದರ - 100 ರಿಂದ 150 ರೂಪಾಯಿ
ಸ್ಥಳ : ಹೆಚ್. ಕಲಪನಹಳ್ಳಿ.
99456 43545, 99015 58855

**ತುರ್ತಾಗಿ ಬೇಕಾಗಿದ್ದಾರೆ**
ಪರ್ವ ಮಿಲೆಟ್ ಹೆಲ್ತ್ ಮಿಕ್ಸ್ ಸೆಂಟರ್ ಎಂಬ ಕಂಪನಿಗೆ ದಾವಣಗೆರೆ ಹಾಗೂ ಹಾವೇರಿ ಜಿಲ್ಲೆ, ಸಿಟಿ, ತಾಲ್ಲೂಕಿನಾದ್ಯಂತ ಡಿಸ್ಟ್ರಿಬ್ಯೂಟರ್ ಬೇಕಾಗಿದ್ದಾರೆ.
84314 81240

**ಹೊಸಮನೆ ಮಾರಾಟಕ್ಕಿದೆ**
ದಾವಣಗೆರೆ ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ 3ನೇ ಮೇನ್ ನಲ್ಲಿ 20x65 ಅಳತೆಯ ನೆಲಮಹಡಿ, ಮೊದಲ ಹಾಗೂ 2 ನೇ ಮಹಡಿಗಳಿರುವ ಪಶ್ಚಿಮ ದಿಕ್ಕಿನ ಹೊಸಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
92428-86869

**ಅಕ್ವಶೈನ್ RO ವಾಟರ್ ಪ್ಯೂರಿಫೈಯರ್**
ನಮ್ಮಲ್ಲಿ ಎಲ್ಲಾ ಕಂಪನಿಯ ವಾಟರ್ ಪ್ಯೂರಿಫೈಯರ್ ಸೇಲ್ಸ್ ಮತ್ತು ಸರ್ವೀಸ್ ಮಾಡಲಾಗುತ್ತದೆ. ಹೋಲ್‌ಸೇಲ್ ದರದಲ್ಲಿ ಎಲ್ಲಾ ಬಿಡಿಭಾಗಗಳು ಲಭ್ಯವಿರುತ್ತವೆ.
ಫೋ. : 99807 27767

**ತಕ್ಷಣ ಬೇಕಾಗಿದ್ದಾರೆ**
ಕೊರಿಯರ್ ಆಫೀಸ್ ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವುಳ್ಳ, ಇಂಗ್ಲಿಷ್ ಓದಲು, ಬರೆಯಲು ಬರುವಂತಹ ಹುಡುಗಿಯರು ಹಾಗೂ ಕೊರಿಯರ್ ಪಾರ್ಸಲ್ ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ. ದ್ವಿಚಕ್ರ ವಾಹನ (Two Wheeler Bike) ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು. ಸಂಪರ್ಕಿಸಿ
89711 19130, 98800 42597
Whatsaap No. 70199 83025

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಸಮುದ್ರದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
95133 14666
(ಹೋಂ ಡೆಲಿವರಿ ಮಾತ್ರ)

**ಉಚಿತ ವಾಸ್ತು ಸಲಹೆಗಳು**
ಉಚಿತ ವಾಸ್ತು ಸಲಹೆಗಳು ಮತ್ತು ಸುಲಭ ಪರಿಹಾರಗಳು.
ಉತ್ತರಾಭಿಮುಖವಾಗಿ ದೀಪ ಹಚ್ಚಿದರೆ ಧನ ಧಾನ್ಯ ಲಾಭ.(T&C) ಸಂಪರ್ಕಿಸಿ.
ಕಲ್ಪತರು ಕನಸ್ಟ್ರಕ್ಷನ್ಸ್ ದಾವಣಗೆರೆ.
98455 83340

## ಏಕರೂಪದ ಪಠ್ಯಕ್ಕೆ ಅರ್ಜಿ

(1ನೇ ಪುಟದಿಂದ) ಒದಗಿಸುವುದು ಕೇಂದ್ರ ಸರ್ಕಾರದ ಹೊಣೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಶಿಕ್ಷಣ ಹಕ್ಕು ಕಾಯ್ದೆಗಳಿಂದ ಮದರಸಾ, ವೇದ ಪಾಠಶಾಲೆ ಹಾಗೂ ಧಾರ್ಮಿಕ ಶಿಕ್ಷಣ ನೀಡುವ ಸಂಸ್ಥೆಗಳನ್ನು ಹೊರಗಿರಿಸಿರುವುದನ್ನೂ ಆಕ್ಷೇಪಿಸಲಾಗಿದೆ.

14 ವರ್ಷದವರೆಗಿನ ಮಕ್ಕಳಿಗೆ ಏಕರೂಪದ ಶಿಕ್ಷಣ ನೀಡುವ ಬದಲು, ಕೇಂದ್ರ ಸರ್ಕಾರ ಸೆಕ್ಷನ್ 1(4) ಹಾಗೂ 1 (5) ಸೇರಿಸುವ ಮೂಲಕ ಮದರಸಾ, ವೇದ ಪಾಠಶಾಲೆ ಹಾಗೂ ಧಾರ್ಮಿಕ ಶಿಕ್ಷಣ ಸಂಸ್ಥೆಗಳಲ್ಲಿನ ಶ್ರೇಷ್ಠತೆಯನ್ನು ಪಡೆಯುವುದರಿಂದ ವಿದ್ಯಾರ್ಥಿಗಳನ್ನು ವಂಚಿತರನ್ನಾಗಿ ಮಾಡಲಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

# ಅಭಿಮಾನ ಶೂನ್ಯತೆಯಿಂದ ಸಮಾಜ ಕಟ್ಟಲು ಸಾಧ್ಯವಿಲ್ಲ

ಹರಿಹರ, ಫೆ.21- ಅಭಿಮಾನ ಶೂನ್ಯತೆಯಿಂದ ಸಮಾಜ ಕಟ್ಟಲು ಸಾಧ್ಯವಿಲ್ಲ ಎಂದು ಮಾಜಿ ಸಚಿವ ಹಾಗೂ ರಾಜ್ಯ ಸ್ಕೌಟ್ ಅಂಡ್ ಗೈಡ್ಸ್ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ ಬೇಸರ ವ್ಯಕ್ತಪಡಿಸಿದರು.

ನಗರದ ಜೀಜಾಮಾತಾ ಕಾಲೋನಿಯಲ್ಲಿ ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯೋತ್ಸವ ಹಾಗೂ ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ ವಾಣಿಜ್ಯ ಸಂಕೀರ್ಣ ಉದ್ಘಾಟನೆ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ನಮ್ಮ ಶ್ರೀಮಠದ ಸ್ವಾಮೀಜಿಯವರು ಭಗವದ್ಗೀತೆಯನ್ನು ಹಲವಾರು ರಾಗಗಳ ಮೂಲಕ ಹಾಡಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರನ್ನು ಪಡೆದವರು ಎಂದು ಹೇಳಿದರು. ನಮ್ಮ ಶ್ರೀಮಠಕ್ಕೆ ಬಹಳ ದೊಡ್ಡ ಇತಿಹಾಸವಿದೆ. ಆದ್ದರಿಂದ ಸಮಾಜದ ಬಂಧುಗಳು ಈ ಮಠಕ್ಕೆ ಭೇಟಿ ನೀಡಲಿ ಎಂದು ಸಮಾಜದವರಿಗೆ ಕರೆ ನೀಡಿದರು.


ಹರಿಹರದ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯಾ

60 ವರ್ಷಗಳ ಹಿಂದೆ ಲವಂಗ ಶ್ರೀಗಳ ಕೀರ್ತನೆಗಳನ್ನು ಕೇಳಲು ಸಾವಿರಾರು ಭಕ್ತರು ಪಾಲ್ಗೊಳ್ಳುತ್ತಿದ್ದರು. ಪ್ರತಿ ಮನೆಯಲ್ಲಿ ಶಿವಾಜಿ ಪುಸ್ತಕವನ್ನು ಇಟ್ಟು ಕೊಳ್ಳಬೇಕೆಂದು ಸಲಹೆ ನೀಡಿದರು. ಇದರಿಂದ ಮಕ್ಕಳಿಗೆ ಒಳ್ಳೆಯ ಮಾರ್ಗದರ್ಶನ ಸಿಗುತ್ತದೆ ಎಂದು ತಿಳಿಸಿದರು. ಶ್ರೀಮಠವನ್ನು ನಾವೆಲ್ಲರೂ ಗೌರವ, ಅಭಿಮಾನದಿಂದ ಕಾಣಬೇಕು. ನೀವು ಮರಾಠ ಅಂತ ಹೇಳಿಕೊಳ್ಳಲು ಅಭಿಮಾನವಿರಬೇಕು ಎಂದು ಹೇಳಿದರು.

ಶಾಸಕ ಎಸ್. ರಾಮಪ್ಪ ಮಾತನಾಡಿ, ತಾಲ್ಲೂಕಿನಲ್ಲಿ ಮರಾಠ ಸಮಾಜವು ಸಣ್ಣ ಸಮಾಜ. ಈ ಸಮಾಜವು ಒಗ್ಗಟ್ಟಿನಿಂದ, ಪ್ರೀತಿ-ವಿಶ್ವಾಸದಿಂದ ಇರಬೇಕು ಎಂದು ತಿಳಿಸಿದರು. ಸಮಾಜಕ್ಕೆ ನನ್ನ ಅನುದಾನದಲ್ಲಿ ನಾನು ಈ ಬಾರಿ ಹಣವನ್ನು ಹಾಕಿ ಕೊಡುತ್ತೇನೆ ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ 27 ಮಳಿಗೆಗಳನ್ನು ಸಮಾಜದ ಶ್ರೀಗಳು ಉದ್ಘಾಟಿಸಿದರು.

ಸಮಾರಂಭದ ಸಾನ್ನಿಧ್ಯವನ್ನು ಜಗದ್ಗುರು ವೇದಾಂತಚಾರ್ಯ ಶ್ರೀ ಮಂಜುನಾಥ ಸ್ವಾಮೀಜಿ ಗೋಸಾಯಿ ಮಹಾಸಂಸ್ಥಾನ ಭವಾನಿ ಪೀಠ, ಗವಿಪುರಂ (ಬೆಂಗಳೂರು) ವಹಿಸಿದ್ದರು. ಈ ಸಂದರ್ಭದಲ್ಲಿ ಪ್ರಾರ್ಥನೆಯನ್ನು ಶ್ರೀಮತಿ ಇಂದ್ರಾಣಿ, ಸ್ವಾಗತವನ್ನು ಟೇಕೋಜಿರಾವ್ ಮಾಡಿದರು. ಅಧ್ಯಕ್ಷೀಯ ನುಡಿಗಳನ್ನು ಸಮಾಜದ ಅಧ್ಯಕ್ಷ ಮರಿಯೋಜಿರಾವ್ ನಡೆಸಿಕೊಟ್ಟರು.

ವೇದಿಕೆಯಲ್ಲಿ ಶಾಸಕರಾದ ಅರವಿಂದ ಜಾಧವ್, ಶ್ರೀನಿವಾಸ್ ಮಾನೆ, ಸುರೇಶ್ ರಾವ್ ಸಾಟೆ, ಕಾಡೋಜಿರಾವ್ ಸಾಟೆ, ಡಾ. ಜೀಯೋಜಿ ರಾವ್, ಯಶವಂತರಾವ್ ಜಾಧವ್, ಮಾಲತೇಶ್, ಆಶಾ ಮರಿಯೋಜಿ ರಾವ್, ವೀಣಾ, ಕಮಲಾಕ್ಷಿ, ನಂದಿಗಾವಿ ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

# ಜಗಳೂರು : ಆರೋಗ್ಯ ಶಿಬಿರಗಳ ಸದುಪಯೋಗಕ್ಕೆ ಕರೆ

ಜಗಳೂರು, ಫೆ.22- ಗ್ರಾಮೀಣ ಭಾಗದ ಜನರು ಉಚಿತ ಆರೋಗ್ಯ ಶಿಬಿರಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಲಯನ್ಸ್ ಕ್ಲಬ್ ತಾಲ್ಲೂಕು ಅಧ್ಯಕ್ಷ ಹಾಗೂ ಲೀಡ್ ಬ್ಯಾಂಕ್ ನಿವೃತ್ತ ಮ್ಯಾನೇಜರ್ ಎನ್.ಟಿ. ಎರ್ರಿಸ್ವಾಮಿ ಸಲಹೆ ನೀಡಿದರು.




ಪಟ್ಟಣದ ರಾಘವೇಂದ್ರ ಆಸ್ಪತ್ರೆಯಲ್ಲಿ ಹಮ್ಮಿಕೊಂಡಿದ್ದ ಎಸ್.ಎಸ್. ನಾರಾಯಣ ಹಾರ್ಟ್ ಸೆಂಟರ್, ರಾಘವೇಂದ್ರ ಆಸ್ಪತ್ರೆ ಹಾಗೂ ಲಯನ್ಸ್ ಕ್ಲಬ್, ಲಿಯೋ ಕ್ಲಬ್‌ಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಉಚಿತ ಹೃದಯ ತಪಾಸಣೆ ಶಿಬಿರದಲ್ಲಿ ಅವರು ಮಾತನಾಡಿದರು.

ಬರದ ನಾಡಿನ ಗ್ರಾಮೀಣ ಭಾಗದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಆರೋಗ್ಯ ಸಮಸ್ಯೆಗಳಿದ್ದು ಆರ್ಥಿಕ ಸಂಕಷ್ಟದಿಂದ ಪಟ್ಟಣ ಹಾಗೂ ನಗರ ಪ್ರದೇಶಗಳಿಗೆ ತೆರಳಿ ಆಸ್ಪತ್ರೆ ವೆಚ್ಚ ಭರಿಸಲಾಗದೆ ಚಿಕಿತ್ಸೆ ಕೈಗೆಟಕುತ್ತಿಲ್ಲ. ಆದ್ದರಿಂದ ಪಟ್ಟಣದಲ್ಲಿ ಹೃದಯ, ಕಣ್ಣಿನ ಸಂಬಂಧಿತ ಉಚಿತ ಆರೋಗ್ಯ ಶಿಬಿರದಂತಹ ಸೂಕ್ತ ವೇದಿಕೆಗಳು ಅವಶ್ಯಕವಾಗಿವೆ ಎಂದು ತಿಳಿಸಿದರು.

ರಾಘವೇಂದ್ರ ಆಸ್ಪತ್ರೆಯ ವೈದ್ಯ ಡಾ. ಅನಿರುದ್ ಮಾತನಾಡಿ, ಹೃದಯ ಸಂಬಂಧಿತ ಸಮಸ್ಯೆಗಳನ್ನು ವೈದ್ಯರ ಬಳಿ ಮುಕ್ತವಾಗಿ ಹಂಚಿಕೊಂಡು ಶಿಬಿರಗಳನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಎಸ್. ಎಸ್. ನಾರಾಯಣ ಹಾರ್ಟ್ ಸೆಂಟರ್ ವೈದ್ಯಾಧಿಕಾರಿ ಡಾ.ಗುರುರಾಜ್, ಫಾದರ್ ವಿಲಿಯಂ ಮಿರಾಂದ್, ಕಸಾಪ ಅಧ್ಯಕ್ಷರಾದ ಸುಜಾತ, ಲಯನ್ಸ್ ಕ್ಲಬ್‌ನ ಜೆ.ಕೆ.ಜಗದೀಶ್ ಗೌಡ, ಆರತಿ ಜಗದೀಶ್ ಗೌಡ, ಚಂಪ, ಸವಿತಾ, ಶಾಹಿನಾ ಬೇಗಂ, ವಾಸಿಂ ಮತ್ತಿತರರು ಇದ್ದರು.

## ಹಿಜಾಬ್ : 25ನೇ ವಿಧಿಗೆ ಸೇರದು

(1ನೇ ಪುಟದಿಂದ) ಕೋಣೆಗಳಲ್ಲಿ ಹಿಜಾಬ್ ಧರಿಸುವ ಕುರಿತು ಮುಖ್ಯ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ, ನ್ಯಾಯಮೂರ್ತಿ ಜೆ.ಎಂ. ಖಾಜಿ ಹಾಗೂ ನ್ಯಾಯಮೂರ್ತಿ ಕೃಷ್ಣ ಎಂ. ದೀಕ್ಷಿತ್ ವಿಚಾರಣೆ ನಡೆಸುತ್ತಿದ್ದಾರೆ. ಪ್ರಸಕ್ತ ಶಾಲಾ ಸಂಸ್ಥೆಗಳ ಒಳಗೆ ಹಿಜಾಬ್ ಧರಿಸುವುದರ ಮೇಲೆ ನಿರ್ಬಂಧ ಇದೆಯೇ ಹೊರತು ಬೇರೆಡೆ ಇಲ್ಲ ಎಂದಿರುವ ನಾವದಗಿ, ಸಂವಿಧಾನದ 19 (1)(ಎ) ಹಾಗೂ 25ನೇ ವಿಧಿಗಳು ಒಟ್ಟಿಗೆ ಸಾಗಲು ಸಾಧ್ಯವಾಗದು ಎಂದಿದ್ದಾರೆ.

ಹಿಜಾಬ್ ಧರಿಸುವುದನ್ನು ಅಗತ್ಯ ಧಾರ್ಮಿಕ ಪದ್ಧತಿ ಎಂದು ಪರಿಗಣಿಸುವುದರಿಂದ ವ್ಯಾಪಕ ಪರಿಣಾಮಗಳಾಗುತ್ತವೆ. ಇದರಲ್ಲಿ ಕಡ್ಡಾಯದ ಅಂಶವಿದೆ. ಹಿಜಾಬ್ ಧರಿಸದೇ ಹೋದರೆ ಸಮುದಾಯದಿಂದ ಉಚ್ಚಾಟಿಸಬಹುದು ಎಂದು ನಾವದಗಿ ಹೇಳಿದ್ದಾರೆ.

ಸಂವಿಧಾನದ 19 (1)(ಎ) ನೇ ವಿಧಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದಾಗಿದೆ. ಸಂವಿಧಾನದ 19 (2) ವಿಧಿಯ ಅನ್ವಯ ಸರ್ಕಾರ ಸಕಾರಣವಾದ ಯಾವುದೇ ನಿರ್ಬಂಧಗಳನ್ನು ಹೇರಬಹುದಾಗಿದೆ. ಮತ್ತೊಂದೆಡೆ ಸಂವಿಧಾನದ 25ನೇ ವಿಧಿಯ ಅನ್ವಯ ಸಾರ್ವಜನಿಕ ಶಿಸ್ತು, ನೈತಿಕತೆ ಹಾಗೂ ಆರೋಗ್ಯಕ್ಕೆ ಒಳಪಟ್ಟು ಧಾರ್ಮಿಕ ಪ್ರತಿಪಾದನೆಗೆ ಅವಕಾಶ ಇದೆ ಎಂದು ನಾವದಗಿ ಹೇಳಿದ್ದಾರೆ.

ಹಿಜಾಬ್‌ಗೆ ಅವಕಾಶ ನೀಡದೇ ಸಂವಿಧಾನದ 15ನೇ ವಿಧಿ ಉಲ್ಲಂಘಿಸಲಾಗಿದೆ ಎಂಬ ಆರೋಪಗಳು ನಿರಾಧಾರ ಎಂದು ನಾವದಗಿ ಹೇಳಿದ್ದಾರೆ. ಈ ವಿಧಿಯ ಅನ್ವಯ ಧರ್ಮ, ಜನಾಂಗ, ಜಾತಿ, ಲಿಂಗ ಇಲ್ಲವೇ ಜನ್ಮಸ್ಥಳದ ಆಧಾರದ ಮೇಲೆ ಪಕ್ಷಪಾತ ಮಾಡುವಂತಿಲ್ಲ

ಮಹಿಳೆಯರ ಘನತೆ ಅತ್ಯುನ್ನತವಾದದ್ದು ಎಂದು ಹೇಳಿದ ನಾವದಗಿ, ತಮ್ಮವಾದ ಮಂಡನೆಯ ಅಂತ್ಯದಲ್ಲಿ 1967ರ ಹಿಂದಿ ಚಿತ್ರ 'ಹಮ್‌ರಾಜ್'ನ 'ನಾ ಮುಹ್ ಛುಪಾ ಕೆ ಜಿಯೋ, ನಾ ಸರ್ ಝುಕಾ ಕೆ ಜಿಯೋ, ಘಮೋ ಕಾ ದೌರ್ ಭಿ ಆಯೆ ತೊ ಮುಸ್ಕುರಾ ಕೆ ಜಿಯೋ' (ಮುಖ ಮುಚ್ಚಿ ಬದುಕಬೇಡಿ, ತಲೆ ಬಾಗಿಸಿ ತಗ್ಗಿಸಿ ಬದುಕಬೇಡಿ. ಕಷ್ಟದ ಸಮಯ ಬಂದರೂ ನಗುತ್ತಾ ಬದುಕಿ) ಹಾಡು ಉಲ್ಲೇಖಿಸಿದರು. ಈ ಹಾಡನ್ನು ಸಾಹಿರ್ ಲುಧಿಯಾನ್ವಿ ಬರೆದಿದ್ದರೆ, ಮಹೇಂದ್ರ ಕಪೂರ್ ಹಾಡಿದ್ದಾರೆ.

ಈ ವಾರದಲ್ಲೇ ಪ್ರಕರಣ ವಿಲೇವಾರಿ ಮಾಡಲು ಬಯಸುವುದಾಗಿ ಹೇಳಿರುವ ಪೀಠ, ಇದಕ್ಕಾಗಿ ಎಲ್ಲ ಕಕ್ಷಿದಾರರ ಸಹಕಾರ ಕೇಳಿದೆ.

## ಹರಪನಹಳ್ಳಿ: ವಿವಿಧ ಕಾಮಗಾರಿಗಳಿಗೆ ಶಾಸಕ ಕರುಣಾಕರ ರೆಡ್ಡಿ ಚಾಲನೆ



ಹರಪನಹಳ್ಳಿ, ಫೆ.22- ತಾಲ್ಲೂಕಿನ ವಿವಿಧ ಗ್ರಾಮಗಳ ಸಿ.ಸಿ. ರಸ್ತೆ, ಕುಡಿಯುವ ನೀರಿನ ಓವರ್ ಟ್ಯಾಂಕ್ ಕಾಮಗಾರಿಗಳಿಗೆ ಶಾಸಕ ಕರುಣಾಕರ ರೆಡ್ಡಿ ಚಾಲನೆ ನೀಡಿದರು. ತಾಲ್ಲೂಕಿನ ಕಡತಿ ಕ್ಯಾಂಪಿನ ಎರಡು ಶಾಲಾ ಕೊಠಡಿಗಳನ್ನು ಉದ್ಘಾಟಿಸಿದರು. ನಂತರ ಕಂಡಿಕೇರಿ ತಾಂಡಾದಿಂದ ಕಡತಿ ಗ್ರಾಮಕ್ಕೆ ಸಂಪರ್ಕಿಸುವ ಎಸ್‌ಸಿಪಿ ಯೋಜನೆಯಲ್ಲಿ ಅಂದಾಜು 3 ಕೋಟಿ 77ಲಕ್ಷ ರೂ.ಗಳ ಸಿ.ಸಿ.ರಸ್ತೆ ಕಾಮಗಾರಿಗೆ ಭೂಮಿ ಪೂಜೆ ಮಾಡಲಾಯಿತು.

ನಂತರ ಟಿಎಸ್‌ಪಿ ಯೋಜನೆಯಲ್ಲಿ ಅಂದಾಜು 2 ಕೋಟಿ 94 ಲಕ್ಷ ರೂ.ಗಳಲ್ಲಿ ತಲುವಾಗಲು ಹಾಗೂ ಗುರುಶಾಂತನಹಳ್ಳಿ ಮತ್ತು ಹರಪನಹಳ್ಳಿ ಸಂಪರ್ಕಿಸುವ ಸಿ.ಸಿ.ರಸ್ತೆ ಕಾಮಗಾರಿಗೆ, ಬಳಿಕ ಅಂದಾಜು 2 ಕೋಟಿ ವೆಚ್ಚದಲ್ಲಿ ಪಿ.ಆರ್.ನಿ.ಕೆ (ಪಿಆರ್‌ಎಎಂಸಿ) ಯೋಜನೆಯಲ್ಲಿ ಮುತ್ತಿಗಿಯಿಂದ ನಿಚ್ಚಾಪುರ ಮಾರ್ಗವಾಗಿ ಹರಪನಹಳ್ಳಿಗೆ ಸಂಪರ್ಕಿಸುವ ಸಿ.ಸಿ.ರಸ್ತೆ ಕಾಮಗಾರಿಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಎಸ್.ಟಿ. ಘಟಕದ ಕಾರ್ಯದರ್ಶಿ ಆರ್.ಲೋಕೇಶ್, ಲೋಕಪಯೋಗಿ ಇಲಾಖೆ ಎಇಇ ಲಿಂಗಪ್ಪ, ಎಇ ಕುಬೇಂದ್ರನಾಯ್ಕ, ಪ್ರಕಾಶ್‌ನಾಯ್ಕ, ಅಶೋಕ, ನಾಗೇಶ್, ಕುಡಿಯುವ ನೀರಿನ ಎಇಇ ಸಿದ್ದರಾಜು, ಗುತ್ತಿಗೆದಾರರಾದ ರಾಜಪ್ಪ, ಬೋವಿ ಸಂಪತ್ತಕುಮಾರ, ನವೀನಪಾಟೀಲ್, ಮುಖಂಡರುಗಳಾದ ಕೊಟ್ರೇಶ್ ಎಸ್, ಕಡತಿ ರಮೇಶ್, ತೆಲಿಗಿ ಅಂಜಿನಪ್ಪ, ಮಲ್ಲೇಶನಾಯ್ಕ, ಯು.ಪಿ. ನಾಗರಾಜ, ಸೇರಿದಂತೆ ಇತರರು ಇದ್ದರು.

## ಕುಣೆಬೆಳಕೆರೆ : ನಾಡಿದ್ದು ಮಹಾದ್ವಾರ ಉದ್ಘಾಟನೆ, ಕಳಸಾರೋಹಣ



ಮಲೇಬೆನ್ನೂರು, ಫೆ.22- ಕುಣೆಬೆಳಕೆರೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದ ಮಹಾದ್ವಾರ ಉದ್ಘಾಟನೆ ಹಾಗೂ ಗೋಪುರದ ಕಳಸಾರೋಹಣ ಕಾರ್ಯಕ್ರಮವನ್ನು ಇದೇ ದಿನಾಂಕ 25ರ ಶುಕ್ರವಾರ ಬೆಳಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಭೋವಿ ಅಂಜಿನಪ್ಪ ತಿಳಿಸಿದ್ದಾರೆ.

ಮಂಗಳವಾರ ಪಟ್ಟಣದಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಸುವರು. ಹಿರೇಕಲ್ಮಠದ ಶ್ರೀ ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಲಿಂಗದಹಳ್ಳಿ ಹಿರೇಮಠದ ಶ್ರೀ ವೀರಭದ್ರೇಶ್ವರ ಶಿವಾಚಾರ್ಯ ಸ್ವಾಮೀಜಿ, ಕಡೇ ನಂದಿಹಳ್ಳಿಯ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸುವರು. ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅವರು ಸಮಾರಂಭ ಉದ್ಘಾಟಿಸಲಿದ್ದು, ಶಾಸಕ ಎಸ್.ರಾಮಪ್ಪ ಅಧ್ಯಕ್ಷತೆ ವಹಿಸುವರು.

## ನಟ ಚೇತನ್ ಪೊಲೀಸ್ ವಶಕ್ಕೆ

(1ನೇ ಪುಟದಿಂದ) ಪೊಲೀಸರು, ಅಜ್ಞಾತ ಸ್ಥಳಕ್ಕೆ ಕರೆದೊಯ್ದಿದ್ದಾರೆ. ಚೇತನ್ ಹಾಗೂ ಅವರ ಅಂಗರಕ್ಷಕನ ಮೊಬೈಲ್ ಸ್ವಿಚ್ ಆಫ್ ಆಗಿದೆ. ಇದೊಂದು ಷಡ್ಯಂತ್ರದಂತೆ ಕಾಣುತ್ತಿದೆ ಎಂದು ಮೇಘಾ ವೀಡಿಯೋ ಮೂಲಕ ಆರೋಪಿಸಿದ್ದಾರೆ.

## ಭರಮಸಾಗರದಲ್ಲಿ ಸರ್ವಜ್ಞ ಜಯಂತಿ



ಭರಮಸಾಗರ, ಫೆ. 22- ಸ್ಥಳೀಯ ಕುಂಬಾರ ಕೇರಿಯ ಸೃಷ್ಟಿ ಸಂಜೀವಿನಿ ಪಂಚಾಯ್ತಿ ಮಟ್ಟದ ಒಕ್ಕೂಟದಲ್ಲಿ ಸರ್ವಜ್ಞ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕರ್ನಳ್ಳಿ ಅನ್ನಪೂರ್ಣಮ್ಮ, ಸ್ಥಳೀಯ ಸುನಂದಮ್ಮ, ಮಾಲಾ, ಕಮಲಮ್ಮ ಉಪಸ್ಥಿತರಿದ್ದರು.

## ಹರ್ಷ ಹತ್ಯೆ ಪ್ರಕರಣ: 12 ಜನರ ಬಂಧನ

(1ನೇ ಪುಟದಿಂದ) ಆಶೀಫುಲ್ಲಾ ಖಾನ್, ರೆಹಾನ್ ಖಾನ್, ನೆಹಲ್ ಹಾಗೂ ಅಬ್ದುಲ್ ಅಫ್ನಾನ್ ಅವರನ್ನು ಬಂಧಿಸಲಾಗಿದೆ. ಖಾಶೀಫ್‌ಗೆ 32 ವರ್ಷ. ಉಳಿದ ಎಲ್ಲ ಆರೋಪಿಗಳ ವಯಸ್ಸು 20ರಿಂದ 22 ಎಂದು ತಿಳಿಸಿದ್ದಾರೆ.

ಬಂಧಿತರು ಮೊದಲು ಜೊತೆಯಾಗಿರುತ್ತಿದ್ದರು. ಈಗ ಪ್ರತ್ಯೇಕವಾಗಿದ್ದಾರೆ. ಖಾಶಿಫ್ ವಿರುದ್ಧ ಕೆಲ ಅಪರಾಧಿಕ ಪ್ರಕರಣಗಳಿವೆ. ಪ್ರಕರಣದಲ್ಲಿ ಇನ್ನೂ ಕೆಲವರು ಭಾಗಿಯಾಗಿದ್ದು, ಅವರ ಶೋಧ ನಡೆಯುತ್ತಿದೆ ಎಂದು ಪ್ರಸಾದ್ ಹೇಳಿದ್ದಾರೆ.

ಭಾನುವಾರ ರಾತ್ರಿ ಭಾರತಿ ನಗರ ಪ್ರದೇಶದಲ್ಲಿ ಕೆಲ ವ್ಯಕ್ತಿಗಳು ಹರ್ಷ ಹತ್ಯೆ ನಡೆಸಿದ್ದರು. ಪ್ರಕರಣದಲ್ಲಿ ಏಳು ಜನರು ಭಾಗಿಯಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದರು.

ಹರ್ಷ ಹತ್ಯೆಯ ನಂತರ ನಗರ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಉದ್ವಿಗ್ನ ವಾತಾವರಣ ಇದೆ. ಹೆಚ್ಚುವರಿ ಪಡೆಗಳನ್ನು ಶಿವಮೊಗ್ಗಕ್ಕೆ ರವಾನಿ ಸಲಾಗಿದೆ. ಪರಿಸ್ಥಿತಿ ನಿಯಂತ್ರಣಕ್ಕೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಎ.ಡಿ.ಜಿ.ಪಿ. ಸಿ. ಪ್ರತಾಪ್ ರೆಡ್ಡಿ ಹೇಳಿದ್ದಾರೆ. ಹತ್ಯೆ ನಂತರ 14 ಕಡೆಗಳಲ್ಲಿ ಹಿಂಸಾಚಾರದ ಘಟನೆಗಳು ನಡೆದಿವೆ. ಮೂರು ಪ್ರಕರಣಗಳಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ. ದೊಂಬಿ ಹಾಗೂ ಹಿಂಸಾಚಾರಗಳಲ್ಲಿ ವಾಹನ ಹಾಗೂ ಆಸ್ತಿಗಳನ್ನು ಕಳೆದುಕೊಂಡವರನ್ನು ಗುರುತಿಸಲು ಪೊಲೀಸರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದು ರೆಡ್ಡಿ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಹೇಳಿಕೆ ನೀಡಿರುವ ಗೃಹ ಸಚಿವ ಆರಗ ಜ್ಞಾನೇಂದ್ರ, ಹರ್ಷ ಹತ್ಯೆಗೆ ಸಂಬಂಧಿಸಿದಂತೆ 12 ಜನರನ್ನು ವಶಕ್ಕೆ ತೆಗೆದುಕೊಂಡು ತನಿಖೆ ನಡೆಸಲಾಗುತ್ತಿದೆ. ಎಲ್ಲಾ ಆಯಾಮಗಳಿಂದ ತನಿಖೆ ನಡೆಸಲಾಗುತ್ತಿದೆ ಎಂದಿದ್ದಾರೆ.

ಕಂದಾಯ ಸಚಿವ ಆರ್. ಅಶೋಕ್ ಹೇಳಿಕೆ ನೀಡಿದ್ದು, ಈ ಹತ್ಯೆಗೂ ಹಿಜಾಬ್ ವಿವಾದಕ್ಕೂ ನಂಟಿದೆ. ಹಿಜಾಬ್ ವಿವಾದ ಆರಂಭವಾದಾಗ ಹತ್ಯೆ ನಡೆದಿದೆ. ಇದೇ ಎರಡೂ ಘಟನೆಗಳಿಗೂ ಇರುವ ಸಂಬಂಧ ತೋರಿಸುತ್ತಿದೆ ಎಂದಿದ್ದಾರೆ.

## 'ಕರುಣಾ' ನೂತನ ಅಧ್ಯಕ್ಷರಾಗಿ ಡಾ. ಮಲ್ಲಿಕಾರ್ಜುನ್

ದಾವಣಗೆರೆ, ಫೆ.22- ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ 2022-23ರ ಆಡಳಿತ ಮಂಡಳಿಗೆ ನೂತನ ಪದಾಧಿಕಾರಿಗಳು ಆಯ್ಕೆಯಾಗಿದ್ದಾರೆ. ಗೌರವಾಧ್ಯಕ್ಷರು: ಡಾ.ಬಿ.ಎಂ. ವಿಶ್ವನಾಥ್ ಮತ್ತು ಎಂ.ಶಿವಪ್ಪ, ಅಧ್ಯಕ್ಷ : ಡಾ. ಹೆಚ್.ಎನ್. ಮಲ್ಲಿಕಾರ್ಜುನ್, ಉಪಾಧ್ಯಕ್ಷ: ಬಸವರಾಜ್ ಒಡೆಯರ್, ಕಾರ್ಯದರ್ಶಿ: ಶಿವನಕೆರೆ ಬಸವಲಿಂಗಪ್ಪ, ನಿರ್ದೇಶಕರು: ಡಾ. ಎಂ.ಜಿ.ಈಶ್ವರಪ್ಪ, ಡಾ. ಹೆಚ್. ವಿ.ವಾಮದೇವಪ್ಪ, ಸಿ.ಜಿ.ದಿನೇಶ್, ಮಂಜುಳ ಬಸವಲಿಂಗಪ್ಪ, ಎಲ್.ಎಸ್. ಪ್ರಭುದೇವ್, ಮಧುಸೂದನ್, ಎನ್.ಪಿ.ಜಯ್ಯಣ್ಣ , ಹೆಚ್.ಆರ್.ಉದಯ್ ಕುಮಾರ್, ಶೈಲಜಾ ತಿಪ್ಪೇಸ್ವಾಮಿ ಮತ್ತು ಕಸ್ತೂರಿ.

## ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ ಕಾರ್ಯಕ್ರಮ



ಉಚಿತವಾಗಿ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮವು ಸ್ಥಳೀಯ ವಿದ್ಯಾ ನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 11 ರವರೆಗೆ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗ ವಹಿಸಬಹುದು. ಮಾಸ್ಕ್ ಧರಿಸುವುದು ಮತ್ತು ಸಾಮಾ ಜಿಕ ಅಂತರ ಕಾಪಾಡಿಕೊಳ್ಳುವುದು ಕಡ್ಡಾಯ.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ (94482-55 544), ಬಿ.ಎಸ್. ವೀರೇಶ್ (88676-91155), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42 713), ಎನ್.ಎಂ. ತಿಪ್ಪೇ ಸ್ವಾಮಿ (98868-74078) ಅವರನ್ನು ಸಂಪರ್ಕಿಸಿ.

**ಮನೆ ಲೀಸ್‌ಗೆ ಇದೆ**
2 BHK ವಿತ್ ಅಟ್ಯಾಚ್ ಹಾಗೂ ಎಲ್ಲಾ ಸೌಲಭ್ಯಗಳಿರುವ Ist Floor, 30x40 ಅಳತೆಯ ಮನೆ ಲೀಸ್‌ಗೆ ಇದೆ ಹಾಗೂ 1 BHK ವಿತ್ ಅಟ್ಯಾಚ್, 2nd Floor ಮನೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ: #389/G-54, S.S. ಹೈಟೆಕ್ ಆಸ್ಪತ್ರೆ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಹಿಂಭಾಗ, ಜಯನಗರ, ದಾವಣಗೆರೆ. ಮೊ: 98447 10844

**Hombal e-Commerce**
APMC Yard 'E' block
Operation Executive / Admin (Female)
Salary :Rs. 12,000/month
Call : 90089 85112

**SBI Life Insurance**
ಕಂಪೆನಿ ವಿಮಾ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಿದೆ. "ಯಾರೂ ಬೇಕಾದರೂ ಸೇರಬಹುದು" * ನಿವೃತ್ತ ನೌಕರರು * ಪಿಗ್ಮಿ ಏಜೆಂಟರು* ಶಿಕ್ಷಕರು* ಸೇಲ್ಸ್ ಎಕ್ಸಿಕ್ಯೂಟಿವ್ಸ್. ವಿದ್ಯಾರ್ಹತೆ:ಪಿಯುಸಿ/ಪದವಿ. ಸೌಲಭ್ಯಗಳು: 1) ಆಕರ್ಷಕ ಕಮೀಷನ್, ವೇತನ, ಆರೋಗ್ಯ ವಿಮೆ 2)ತಿಂಗಳಿಗೆ 10 ಸಾವಿರ ಪೆನ್ಷನ್. Ravi kumar M.G, Agency Manager SBI Life Ins. DVG
95358 10209

**House for Rent / Lease**
Banashankari Layout,
Ground floor : 2BHK (1800 sq.ft)
First floor : 1BHK - 2 Houses single room with attached Bathroom commerical space.
91645 26705

**REQUIRED**
Sales executive for SERVO Lubricants in Chitradurga area.
For details please contact
79759 56930

**Required**
Boys / Ladies hostel warden, Telecalling only for ladies (experience in institution), reception also.
Location:- Davangere
87628 67557

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
SSLC, PUC, Technical & Non Technical, Pharmacy & BHMS (Government & Private College)
ಕೆಲವೇ ಸೀಟುಗಳು ಲಭ್ಯ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 82173 02649

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಸಂಪರ್ಕಿಸಿ :
S.T. ಸೋಮಶೇಖರ
98803 37686

**ಹೋಟೆಲ್ /ಮನೆ ಬಿಲ್ಡಿಂಗ್ ಮಾರಾಟಕ್ಕಿದೆ**
ಪಿ.ಬಿ. ರಸ್ತೆ, ಜಿಎಂಐಟಿ ಕಾಲೇಜು ಮುಂದೆ 22 ಅಗಲ 100 ಅಡ್ಡಿ ಉದ್ದ ದಕ್ಷಿಣ ದಿಕ್ಕಿರುವ ಹೋಟೆಲ್ /ಮನೆ ಬಿಲ್ಡಿಂಗ್ ಮಾರಾಟಕ್ಕಿದೆ. ಸಂಪರ್ಕಿಸಿ
90085 25785

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,450/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000
97392 15000

**PG / HOSTEL Building ಬಾಡಿಗೆಗೆ**
15 Rooms with attached Bathrooms + Kitchen & Dining Hall.
Address : 6th Cross, BIET College Road, Near Bapuji High School, Davanagere.
99725 35329, 85531 84854

**ತಕ್ಷಣ ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಮತ್ತು ಹೌಸ್ ಕೀಪಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ.
ಪಾಪುಲರ್ ಸೆಕ್ಯೂರಿಟಿ & ಅಲೈಡ್ ಸರ್ವೀಸ್ಸ್
# 01, ಮೊದಲನೇ ಮಹಡಿ, RMC ಲಿಂಕ್ ರೋಡ್, ಈರುಳ್ಳಿ ಮಾರ್ಕೆಟ್ ಎದುರು, ದಾವಣಗೆರೆ.
90362 37886

**ಬೇಕಾಗಿದ್ದಾರೆ**
ಮೆಡ್‌ಕ್ಯೂರ್ ಔಷಧಿ ಅಂಗಡಿಯಲ್ಲಿ ಕೆಲಸಕ್ಕೆ ಅನುಭವವಿರುವ ಹುಡುಗ ಮತ್ತು ಹುಡುಗಿಯರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 30
ಜಯನಗರ, SSI ಆಸ್ಪತ್ರೆ ರೋಡ್, ದಾವಣಗೆರೆ.
78999 91860

**ಮನೆ ಮಾರಾಟಕ್ಕಿದೆ**
20x30 ಅಳತೆಯ ಪೂರ್ವ ದಿಕ್ಕಿನ Final Approved Ground and First Floor ಮನೆ ಮಾರಾಟಕ್ಕಿದೆ. Near Bagirathi Circle, Davanagere.
87470 61217

**WANTED**
Banking Sector tele caller (Female Only)
Qualification - Any Degree/PUC
No.2257/5 2nd Floor, M.C.C 'A' Block
Beside Togataveera Kalyana Manatapa
96630 72555
Interview time : 11 AM

**JOBS**
Sales Manager/Executives
Any Degree (English, Computer Knowledge)
Office Job/Marketing/ Field Work, Male/Female
Freshers/Experienced
98444 92888

**ಮನೆ, ಮಳಿಗೆ ಬಾಡಿಗೆಗಿದೆ**
40 ಫೀಟ್ ರೋಡ್, ಡಿಸಿಎಂ ಹಿಂಭಾಗ, ಎಸ್. ಎಸ್. ಹಾಸ್ಪಿಟಲ್ ರೋಡ್, ಶಕ್ತಿ ನಗರ ಸರ್ಕಲ್, ದಾವಣಗೆರೆ ಇಲ್ಲಿ 30x60 ಪೂರ್ವ ಫೇಸ್ ವುಳ್ಳ ಮೊದಲನೆ ಮಹಡಿಯಲ್ಲಿ 2 ಬೆಡ್ ರೂಂವುಳ್ಳ ಮನೆ ಮತ್ತು ಕೆಳಗಡೆ ಮಳಿಗೆ ಬಾಡಿಗೆಗಿದೆ. ಸಂಪರ್ಕಿಸಿ:
99161 79135, 90080 30330

**ಬೇಕಾಗಿದ್ದಾರೆ**
1) ಕ್ಯಾಷಿಯರ್ - 2,
2) ಟ್ಯಾಲಿ ಆಪರೇಟರ್ - 3
ಸಂಪರ್ಕಿಸಿ:
ದ್ವಾರಕಾ ಟ್ರೇಡರ್ಸ್
ಎಂ.ಜಿ.ರೋಡ್, ಗಡಿಯಾರ ಕಂಬದ ಹತ್ತಿರ, ದಾವಣಗೆರೆ.
ಮೊ: 70195 31316

**ಬೇಕಾಗಿದ್ದಾರೆ**
ಸ್ಟೀಲ್ ಫರ್ನೀಚರ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ನಯನ ಏಜೆನ್ಸೀಸ್
ಚಾಮರಾಜ ಪೇಟೆ, ದಾವಣಗೆರೆ.
9986393177

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಶ್ರೀ ಮುರುಘನ್ ಬೋರ್‌ವೆಲ್ಸ್**
ನಮ್ಮಲ್ಲಿ ಸೂಪರ್ ಫಾಸ್ಟ್ 4.5' ಇಂಚು ಬೋರ್‌ವೆಲ್ ಕೊರೆಯಲಾಗುವುದು. ಮನೆಯ ಒಳಗಡೆ ಮತ್ತು ಹೊರಗಡೆ 300-450 ಅಡಿಯವರೆಗೆ ಕೊರೆಯಲಾಗುವುದು.
99640 78484, 95906 15776

**Required**
DTP and Photoshop knowing Female candidates required for Office work salary 6500 + Incentives. Time 10-6 PM
99006 66122
99862 30333

**ANARGYA ASSOCIATES**
BUILDING Planings 3D Desgins and Material Contractor, competative Price.
95351 11990

# ಎಸ್.ಎಫ್.ಜೆ.ಯ ಪಂಜಾಬ್ ಪೊಲಿಟಿಕ್ಸ್ ಟಿವಿ ಮೇಲೆ ನಿಷೇಧ

ನವದೆಹಲಿ, ಫೆ. 22 – ನಿಷೇಧಿತ ಸಿಖ್ಸ್ ಫಾರ್ ಜಸ್ಟೀಸ್ (ಎಸ್.ಎಫ್.ಜೆ.) ಸಂಘಟನೆ ಸೇರಿದ ಆಪ್, ವೆಬ್‌ಸೈಟ್ ಹಾಗೂ ಸಾಮಾಜಿಕ ಜಾಲತಾಣ ಖಾತೆಗಳ ಮೇಲೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ನಿಷೇಧ ಹೇರಿದೆ. ಚುನಾವಣಾ ವೇಳೆ ಈ ವೇದಿಕೆಗಳ ಮೂಲಕ ಸಾರ್ವಜನಿಕ ಶಾಂತಿಗೆ ಭಂಗ ತರುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಚುನಾವಣಾ ಸಂದರ್ಭದಲ್ಲಿ ಆನ್‌ಲೈನ್ ತಾಣಗಳನ್ನು ಬಳಸಿಕೊಂಡು ಪ್ರಕ್ಷುಬ್ಧತೆ ಸೃಷ್ಟಿಸುವ ಯತ್ನಗಳನ್ನು ನಡೆಸುತ್ತಿರುವ ಗುಪ್ತಚರ ಮಾಹಿತಿ ಬಂದಿರುವ ಹಿನ್ನೆಲೆಯಲ್ಲಿ ಪಂಜಾಬ್ ಪೊಲಿಟಿಕ್ಸ್ ಟಿವಿಯ ಡಿಜಿಟಲ್ ಮಾಧ್ಯಮಗಳ ಮೇಲೆ ನಿಷೇಧ ಹೇರಲಾಗಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೆಚ್.ಕೆ.ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ಬಡಾವಣೆ ಹಾಗೂ ಇ.ಎಸ್.ಐ. ಆಸ್ಪತ್ರೆ ಕೆ.ಟಿ.ಜೆ ನಗರ ಪೋಲಿಸ್ ಠಾಣೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಹಿಂದೂ ಕಾರ್ಯಕರ್ತನ ಹತ್ಯೆ : ಹಿಂದೂಪರ ಸಂಘಟನೆಗಳ ಆಕ್ರೋಶ

ದಾವಣಗೆರೆ, ಫೆ.22- ಶಿವಮೊಗ್ಗದಲ್ಲಿ ನಡೆದ ಹಿಂದೂ ಕಾರ್ಯಕರ್ತ ಹರ್ಷನ ಹತ್ಯೆ ಖಂಡಿಸಿ ನಗರದಲ್ಲಿ ಇಂದು ಹಿಂದೂಪರ ಸಂಘಟನೆಗಳಿಂದ ತೀವ್ರ ಆಕ್ರೋಶ ವ್ಯಕ್ತವಾಯಿತು.

**ವಿಹೆಚ್‌ಪಿ - ಭಜರಂಗ ದಳ ಜಂಟಿ ಪ್ರತಿಭಟನೆ :** ವಿಶ್ವ ಹಿಂದೂ ಪರಿಷದ್ - ಭಜರಂಗ ದಳದ ವತಿಯಿಂದ ಜಂಟಿಯಾಗಿ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ್ದ ಸಂಘಟನೆ ಮುಖಂಡರು, ಕಾರ್ಯಕರ್ತರು ಹಿಂದೂಗಳ ರಕ್ಷಣೆಗೆ ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಂತರ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಹರ್ಷನ ಹತ್ಯೆಯಲ್ಲಿ ಎಸ್‌ಡಿಪಿಐ ಮತ್ತು ಪಿಎಫ್‌ಐ ಗಳಂತಹ ದೇಶದ್ರೋಹಿ ಸಂಘಟನೆಗಳ ಕೈವಾಡವಿದೆ. ಈ ಬಗ್ಗೆ ಸರ್ಕಾರ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಹರ್ಷನಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಸಂಘಟನೆ ಮುಖಂಡರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆ ಜಿಲ್ಲಾ ಸಂಚಾಲಕ ಸಿ.ಎಸ್.ರಾಜು, ಅಖಾಡ ಪ್ರಮುಖ್ ಹರೀಶ್ ಪವಾರ್, ಮುಖಂಡರಾದ ಪ್ರಹ್ಲಾದ್ ತೇಲ್ಕರ್, ಗೋಪಾಲರಾವ್ ಸಾವಂತ್, ವಸಂತ್ ಕುಮಾರ್, ಕೃಷ್ಣಮೂರ್ತಿ, ಉಮೇಶ



ಸೇರಿದಂತೆ ಇತರರು ಭಾಗವಹಿಸಿದ್ದರು.

**ಶ್ರೀರಾಮ ಸೇನೆ ಮನವಿ :** ಶ್ರೀರಾಮ ಸೇನೆ ಕರ್ನಾಟಕ ಜಿಲ್ಲಾ ಮತ್ತು ತಾಲ್ಲೂಕು ಘಟಕದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ನಂತರ ಎಸ್ ಡಿಪಿಐ, ಪಿಎಫ್‌ಐ, ಸಿಎಫ್‌ಐ ಸಂಘಟನೆಗಳನ್ನು ನಿಷೇಧಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕಳೆದ ಹಲವಾರು ವರ್ಷಗಳಿಂದ ಎಸ್.ಡಿ.ಪಿ.ಐ, ಪಿ.ಎಫ್.ಐ, ಸಿ.ಎಫ್.ಐ ಸಂಘಟನೆಗಳು ಹರ್ಷನ ಹತ್ಯೆಗೆ ಪ್ರಯತ್ನ ನಡೆಸುತ್ತಿದ್ದರೂ ರಕ್ಷಣೆ ನೀಡದಿರುವುದು ಸರ್ಕಾರದ ನಾಚಿಗೇಡಿನ ಸಂಗತಿಯಾಗಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಹತ್ಯೆಯ ಆರೋಪಿಗಳನ್ನು ತಕ್ಷಣವೇ ಬಂಧಿಸಿ, ಉಗ್ರ ಶಿಕ್ಷೆಯಾಗಬೇಕು, ಎಸ್.ಡಿ.ಪಿ.ಐ, ಪಿ.ಎಫ್.ಐ. ಸಿ.ಎಫ್.ಐ ಸಂಘಟನೆಗಳನ್ನು ನಿಷೇಧಿಸಿ ಅದರ ಪ್ರಮುಖರನ್ನು ಒಳಗೆ ಹಾಕಬೇಕು, ಮೃತನ ಕುಟುಂಬಕ್ಕೆ 25 ಲಕ್ಷ ರೂ. ಗಳ ಪರಿಹಾರ ನೀಡಬೇಕು, ಹಿಂದೂ ಕಾರ್ಯಕರ್ತರು ಮತ್ತು ಹಿಂದೂ ನಾಯಕರಿಗೆ ಸೂಕ್ತ ಭದ್ರತೆ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಮಣಿ ಸರ್ಕಾರ್, ರಾಜ್ಯ ಸಂಪರ್ಕ ಪ್ರಮುಖ್ ಪರಶುರಾಮ ನಡುಮನಿ, ಮುಖಂಡರುಗಳಾದ ಬಿ.ಜಿ. ರಾಹುಲ್, ಆಲೂರು ರಾಜಶೇಖರ, ರಾಜು ಸರ್ಕಾರ್, ಶಿಬಾರ್ ರಮೇಶ್, ಶ್ರೀಧರ್, ವಿನೋದ್ ವೇರ್ಣೇಕರ್, ಡಿ.ಬಿ. ವಿನೋದ್ ರಾಜ್, ಕರಾಟೆ ರಮೇಶ್ ಸೇರಿದಂತೆ ಇತರರಿದ್ದರು.

# ರಾಜನಹಳ್ಳಿ ಶ್ರೀಗಳ ಹೋರಾಟಕ್ಕೆ ಹೆಚ್ಚುತ್ತಿರುವ ಬೆಂಬಲ : ಕೇಂದ್ರ ಸಚಿವರು, ಶಾಸಕರ ಭೇಟಿ



ಬೆಂಗಳೂರು, ಫೆ.22- ಸಮುದಾಯದ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಮಂಗಳವಾರ 13ನೇ ದಿನಕ್ಕೆ ಕಾಲಿಟ್ಟಿದೆ.

ಮಾಜಿ ಸಂಸದ ಐ.ಜಿ.ಸನದಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ, ಶಾಸಕರಾದ ರಾಜೂಗೌಡ, ಅರುಣ್‌ಕುಮಾರ್ ಪೂಜಾರ್, ಶ್ರೀನಿವಾಸ್ ಮಾನೆ, ಶ್ರೀಮತಿ ಪೂರ್ಣಿಮಾ ಶ್ರೀನಿವಾಸ್, ಕಂಪ್ಲಿ ಗಣೇಶ್, ಶಿರಾ ಶಾಸಕ ರಾಜೇಶ್‌ಗೌಡ, ಮಾಜಿ ಶಾಸಕರಾದ ಹೊಸದುರ್ಗದ ಬಿ.ಜಿ.ಗೋವಿಂದಪ್ಪ, ಹೊಳಲ್ಕೆರೆಯ ಎ.ವಿ.ಉಮಾಪತಿ, ಪಾವಗಡದ ತಿಮ್ಮರಾಜು, ಮಸ್ಕಿಯ ಪ್ರತಾಪಗೌಡ ಪಾಟೀಲ್ ಸೇರಿದಂತೆ ಇನ್ನೂ ಅನೇಕರು ದಿನದ ಧರಣಿಯಲ್ಲಿ ಭಾಗವಹಿಸಿ, ಬೆಂಬಲ ವ್ಯಕ್ತಪಡಿಸಿದರು.

ನಿವೃತ್ತ ಜಿಲ್ಲಾಧಿಕಾರಿ ಬಿ.ಶಿವಪ್ಪ ಅವರು ಸರ್ಕಾರಗಳ ವಿಳಂಬ ನೀತಿಯನ್ನು ಖಂಡಿಸಿದರು. ಚಿತ್ರದುರ್ಗ ನಗರಸಭೆ ಅಧ್ಯಕ್ಷರಾದ ತಿಪ್ಪಮ್ಮ, ಮಾಜಿ ಅಧ್ಯಕ್ಷ ಕಾಂತರಾಜು, ಸದಸ್ಯ ವೆಂಕಟೇಶ್ ಅವರುಗಳು ಭಾಗವಹಿಸಿದ್ದರು.

ಸೋಮವಾರ ಧರಣಿ ಸತ್ಯಾಗ್ರಹದಲ್ಲಿ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ್, ಹಗರಿಬೊಮ್ಮನಹಳ್ಳಿ ಶಾಸಕ ಭೀಮಾನಾಯ್ಕ, ಕುಷ್ಟಗಿ ಶಾಸಕ ಅಮರೇಗೌಡ ಬಯ್ಯಾಪುರ್, ಮಾಜಿ ಸಚಿವ ಯು.ಟಿ.ಖಾದರ್, ಸಿದ್ದು ನ್ಯಾಮೇಗೌಡ, ಗಣೇಶ್, ಪ್ರಕಾಶ್, ಹುಕ್ಕೇರಿ ವಿಧಾನ ಪರಿಷತ್ ಸದಸ್ಯರಾದ ಎನ್. ರವಿಕುಮಾರ್, ಕೆ.ಎಸ್.ನವೀನ್, ಮಾಜಿ ಎಂಎಲ್‌ಸಿ ಸಿದ್ದರಾಜು, ಮಠದ ಆಡಳಿತಾಧಿಕಾರಿ ಟಿ.ಓಬಳಪ್ಪ, ಹೊನ್ನಾಳಿ ತಾಲ್ಲೂಕಿನ ತಿಮ್ಮೇನಹಳ್ಳಿ ಚಂದಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸರಸ್ವತಿ ಬಡಾವಣೆ ಎ ಮತ್ತು ಬಿ ಬ್ಲಾಕ್, ಜಯನಗರ ಎ, ಬಿ ಮತ್ತು ಸಿ ಬ್ಲಾಕ್, ಭೂಮಿಕ ನಗರ, ಜೆ.ಎನ್ ಕಾನ್ವೆಂಟ್, ಕೆಎಸ್‌ಎಸ್ ಕಾಲೇಜ್ ಮತ್ತು ಸುತ್ತಮುತ್ತಲ ಪ್ರದೇಶಗಳು.

ಪಿ.ಬಿ. ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್, ಬಿ.ಎಸ್.ಎನ್.ಎಲ್ ಕಛೇರಿ, ಶಂಕರ್ ವಿಹಾರ್ ಬಡಾವಣೆ, ಶಾಂತಿ ನಗರ ಮತ್ತು ವಿನಾಯಕ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ಆರ್.ಟಿ.ಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್.ಪಿ.ಎಸ್ ನಗರ 2ನೇ ಹಂತ, ಎಸ್‌ಎಮ್‌ಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ, ಶಿವಾಲಿ ಚಿತ್ರ ಮಂದಿರದ ಅಕ್ಕ ಪಕ್ಕ ಹಾಗೂ ಟೀಚರ್ಸ್‌ಕಾಲೋನಿ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಇರುವುದಿಲ್ಲ.

## ತಾಲ್ಲೂಕಿನ ಗ್ರಾಮೀಣ ಪ್ರದೇಶದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ನೀಲಾನಹಳ್ಳಿ ಮಾರ್ಗದ ಗ್ರಾಮಗಳಾದ ನೀಲಾನಹಳ್ಳಿ, ದೊಡ್ಡಬಾತಿ, ಹಳೇಬಾತಿ ಮತ್ತು ಗುಡ್ಡದಕ್ಯಾಂಪ್ ಸುತ್ತಮುತ್ತ ಹಾಗೂ ಎಫ್-10 ವಾಟರ್ ವರ್ಕ್ಸ್ ಮಾರ್ಗದ ಮಹಾನಗರ ಪಾಲಿಕೆ ಕುಡಿಯುವ ನೀರಿನ ಘಟಕದ ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

# ಐಸಿಟಿಯೊಂದಿಗೆ ಬಿಐಇಟಿ ನೂತನ ಒಪ್ಪಂದ



ದಾವಣಗೆರೆ, ಫೆ. 22- ವಿದ್ಯಾರ್ಥಿಗಳ ಸರ್ವತೋಮುಖ ಶಿಕ್ಷಣಕ್ಕೆ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಫೆ. 17 ರಂದು ಐಸಿಟಿ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ನಾಗಾಲೋಟದಿಂದ ಹೊಸ ಹೊಸ ಆಯಾಮಗಳತ್ತ ಮುಖಮಾಡಿ ನವ ನವೀನ ಬದುಕಿನತ್ತ ಸತತವಾಗಿ ಚಲಿಸುತ್ತಿರುವ ಇಂದಿನ ಹೊಸಯುಗ ಪ್ರತಿಕ್ಷಣ ಹೊಸದನ್ನೇ ಬಯಸುತ್ತದೆ ಮತ್ತು ವಿದ್ಯಾರ್ಥಿಗಳಲ್ಲಿ ಅಪಾರವಾದ ಸ್ಪರ್ಧೆಯನ್ನು ನಿರ್ಮಿಸಿದೆ.

ಈ ಸ್ಪರ್ಧಾತ್ಮಕ ಯುಗಕ್ಕೆ ಹೊಂದಿಕೊಂಡು ಬದುಕನ್ನು ರೂಪಿಸಲು ವಿದ್ಯಾರ್ಥಿಗಳಿಗೆ ಕೇವಲ ಪರಿಕ್ರಮ ಶಿಕ್ಷಣ ಸಾಲದಾಗಿದ್ದು, ವಿದ್ಯಾರ್ಥಿಗಳು ಸಂವಹನಾಶೀಲತೆ, ಸಮಯ ನಿರ್ವಹಣಾ ಕೌಶಲ್ಯ, ಒಟ್ಟಾಗಿ ತಂಡದಲ್ಲಿ ಕೆಲಸ ಮಾಡುವ ಕೌಶಲ್ಯ, ಒತ್ತಡ ನಿರ್ವಹಣಾ ಸಾಮರ್ಥ್ಯ ಇತ್ಯಾದಿ ಅನೇಕ ಪಠ್ಯೇತರ ಮೃದು ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಇದನ್ನು ಮನಗಂಡು ಬಿಐಇಟಿ ಐಸಿಟಿ ಕಂಪನಿಯೊಂದಿಗೆ ಅಸೋಸಿಯೇಟ್ ಸದಸ್ಯತ್ವ ಒಪ್ಪಂದ ಮಾಡಿಕೊಂಡಿದೆ.

ಈ ಒಪ್ಪಂದ ಮುಂದಿನ ಐದು ವರ್ಷಗಳ ಕಾಲ ಜಾರಿಯಲ್ಲಿರುತ್ತದೆ.ಇದಲ್ಲದೆ ಐಸಿಟಿ ಕಂಪನಿಯು ಬಿಐಇಟಿ ವಿದ್ಯಾರ್ಥಿಗಳಿಗೆ ನೇಮಕಾತಿ ಪ್ಲಾಟ್‌ಫಾರ್ಮ್ ಒದಗಿಸಿದೆ. ಈಗಾಗಲೇ 100 ವಿದ್ಯಾರ್ಥಿಗಳು ಅರ್ನ್ಸ್ಟ್ ಅಂಡ್ ಎಂಗ್, ಟಾಟಾ ಎಲೆಕ್ಸಿ ಇನ್ಸರೇಜ್ ಇತ್ಯಾದಿ ಕಂಪನಿಗಳಲ್ಲಿ ನೇಮಕಾತಿ ಹೊಂದಲು ನೆರವಾಗಿದೆ.

ಬಿಐಇಟಿ ಕಾಲೇಜಿನ ಪ್ರಾಚಾರ್ಯ ಡಾ. ಹೆಚ್.ಬಿ. ಅರವಿಂದ್, ಐಸಿಟಿ ಕಂಪನಿಯ ರಾಜ್ಯ ಪ್ರಮುಖರಾದ ವಿಷ್ಣುಪ್ರಸಾದ್, ಕಂಪನಿಯ ಜಕಾವುಲ್ಲಾ ಇವರು ಒಪ್ಪಂದಕ್ಕೆ ಸಹಿ ಹಾಕಿದರು.

ಈ ಸಂದರ್ಭದಲ್ಲಿ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ನಿಯೋಜನಾ ಡೀನ್ ಡಾ. ಸಿ.ಆರ್. ನಿರ್ಮಲ, ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು ಹಾಜರಿದ್ದರು.

ಈ ಸಾಧನೆಗೆ ಬಾಪೂಜಿ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ. ಶಾಮನೂರು ಶಿವಶಂಕರಪ್ಪ , ಜಂಟಿ ಕಾರ್ಯದರ್ಶಿ ಎಸ್.ಎಸ್. ಮಲ್ಲಿಕಾರ್ಜುನ್ ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ಶರಣ ಸಾಹಿತ್ಯ ಪರಿಷತ್ತಿನ ಸೇವಾ ದೀಕ್ಷಾ ಕಾರ್ಯಕ್ರಮ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ನಗರ ಘಟಕದ ನೂತನ ಪದಾಧಿಕಾರಿಗಳ ಸೇವಾ ದೀಕ್ಷೆ ಹಾಗೂ ಶರಣ ಚಿಂತನ ಕಾರ್ಯಕ್ರಮವು ಇಂದು ಬೆಳಿಗ್ಗೆ 11 ಗಂಟೆಗೆ ಬಸವ ಮಂಟಪದಲ್ಲಿ ಜರುಗಲಿದೆ ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ತಿಳಿಸಿದ್ದಾರೆ.

ಸಾಣೇಹಳ್ಳಿಯ ಶ್ರೀ ಡಾ .ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿಕೊಳ್ಳಲಿದ್ದಾರೆ. ಡಾ. ಎಂ.ಜಿ. ಈಶ್ವರಪ್ಪ ಸಮಾರಂಭ ಉದ್ಘಾಟಿಸುವರು. ಅನುಸೂಯಾದೇವಿ ಟಿ.ಎಸ್. ಪಾಟೀಲ್ ಸೇವಾದೀಕ್ಷೆ ನೆರವೇರಿಸಲಿದ್ದಾರೆ. ಪರಿಷತ್ತಿನ ಅಧ್ಯಕ್ಷ ಎಂ. ಪರಮೇಶ್ವರಪ್ಪ ಸಿರಿಗೆರೆ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ. ಅನುಭಾವದ ನುಡಿಯನ್ನು ಎಂ. ಹನುಮಂತಪ್ಪ ಐಗೂರು ನುಡಿಯಲಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಯರಗುಂಟ 66/11ಕೆ. ವಿ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಫೀಡರ್ ವ್ಯಾಪ್ತಿಯಲ್ಲಿ ಕೆಪಿಟಿಸಿಎಲ್ ವತಿಯಿಂದ ತುರ್ತು ಕಾಮಗಾರಿ ಹಮ್ಮಿಕೊಂಡಿದ್ದು ಇಂದು ಬೆಳಿಗ್ಗೆ 10 ಸಂಜೆ 5 ಗಂಟೆಯವರೆಗೆ ಕರೂರು ಇಂಡಸ್ಟ್ರಿಯಲ್ ವ್ಯಾಪ್ತಿಯ ಡಿ.ಸಿ ಆಫೀಸ್, ಕರೂರು ಇಂಡಸ್ಟ್ರಿಯಲ್ ಏರಿಯ ಪಿ.ಬಿ ರಸ್ತೆ, ಸ್ಮಾರ್ಟ್ ಸಿಟಿ ಆಫೀಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

# ಜಿಲ್ಲಾಡಳಿತದಿಂದ ಕವಿ ಶ್ರೀ ಸರ್ವಜ್ಞ ಜಯಂತಿ



ದಾವಣಗೆರೆ, ಫೆ.22- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ತ್ರಿಪದಿ ಕವಿ ಶ್ರೀ ಸರ್ವಜ್ಞ ಜಯಂತಿಯನ್ನು ಭಾನುವಾರ ಜಿಲ್ಲಾಡಳಿತ ಭವನದಲ್ಲಿ ಸರಳವಾಗಿ ಆಚರಿಸಲಾಯಿತು.

ಕುಂಬಾರ ಸಮಾಜದ ಅಧ್ಯಕ್ಷ ಪುಷ್ಪರಾಜ್ ಮಾತನಾಡಿ, ಸರ್ವಜ್ಞ ಸಮಾಜದ ಅಂಕುಡೊಂಕುಗಳನ್ನು ತ್ರಿಪದಿಯಲ್ಲಿ ವರ್ಣನೆ ಮಾಡಿದ್ದಾರೆ. ಪ್ರತಿಯೊಬ್ಬರೂ ಸಹ ಸರ್ವಜ್ಞರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯೋಣ ಎಂದು ಹೇಳಿದರು.

ಕುಂಬಾರ ಸಮಾಜದ ಗೌರವಾಧ್ಯಕ್ಷ ಬಸವರಾಜು ಕುಂಚೂರು ಮಾತನಾಡಿ, ಸರ್ವಜ್ಞ ಸತ್ಯ ಶುದ್ಧ ಕಾಯಕ ಮಾಡುತ್ತಾ ಸಮಾಜಕ್ಕೆ ಉತ್ತಮ ಸಂದೇಶಗಳನ್ನು ನೀಡಿದ್ದಾರೆ. ಪ್ರಸ್ತುತ ನಮ್ಮ ಸಮಾಜ ಬಹಳ ಹಿಂದುಳಿದಿದೆ. ಇನ್ನು ಮುಂದೆ ಎಲ್ಲರು ಸರ್ವಜ್ಞರ ಕಾಯಕವನ್ನು ನಂಬಿ ಸಮಾಜವನ್ನು ಚೆನ್ನಾಗಿ ಬೆಳೆಸಿಕೊಂಡು ಹೋಗೋಣ ಎಂದು ಹೇಳಿದರು.

ಕುಂಬಾರ ಸಮಾಜದ ಉಪಾಧ್ಯಕ್ಷ ಕರಿಬಸಪ್ಪ ಮಾತನಾಡಿ, ಸರ್ವಜ್ಞರ ತ್ರಿಪದಿಗಳನ್ನು ಸರ್ಕಾರಿ ಕಚೇರಿಗಳಲ್ಲಿ ಅನಾವರಣಗೊಳಿಸಬೇಕು. ಸರ್ಕಾರದಿಂದ ಈ ಸಮಾಜಕ್ಕೆ ಸವಲತ್ತುಗಳನ್ನು ನೀಡುವಂತೆ ಅಧಿಕಾರಿಗಳಲ್ಲಿ ಮನವಿ ಮಾಡಿಕೊಂಡರು.

ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಕುಂಬಾರ ಸಮಾಜದ ಟೌನ್ ಅಧ್ಯಕ್ಷ ಕೆ.ಜಿ. ಷಣ್ಮುಖಪ್ಪ, ಇ. ತಿಪ್ಪೇಸ್ವಾಮಿ, ಟಿ. ಅಜ್ಜಣ್ಣ, ಕೆ.ಎಂ. ಬಸವರಾಜ, ಸದಾಶಿವಪ್ಪ, ಗಣೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಹರ್ಷ ಹತ್ಯೆ; ಹೊನ್ನಾಳಿಯಲ್ಲಿ ಪ್ರತಿಭಟನೆ



ಹೊನ್ನಾಳಿ, ಫೆ.22- ಶಿವಮೊಗ್ಗದ ಯುವಕ ಹರ್ಷ ಕೊಲೆಗೆ ಕಾರಣರಾದವರನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಇಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ನಡೆದ ಪ್ರತಿಭಟನಾ ಸಭೆಯಲ್ಲಿ ಜಿ.ಪಂ ಮಾಜಿ ಸದಸ್ಯ ಎಂ.ಆರ್. ಮಹೇಶ್ ಒತ್ತಾಯಿಸಿದರು.

ಜಿಹಾದಿಗಳ ಮೋಸಕ್ಕೆ ಬಲಿಯಾಗಿರುವ ಹರ್ಷ ಅವರ ಆತ್ಮಕ್ಕೆ ಶಾಂತಿ ಲಭಿಸಬೇಕಾದರೆ ಕೊಲೆಗೆ ಕಾರಣರಾದ ಎಸ್‌ಡಿಪಿಐ ಮತ್ತು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಗಳನ್ನು ನಿಷೇಧಿಸಬೇಕು ಎಂದು ಆಗ್ರಹಿಸಿದರು. ಮುಖಂಡರಾದ ಇಂಚರ ನವೀನ್, ಕುಮಾರಸ್ವಾಮಿ, ಚಂದ್ರು, ಚಿನ್ನಪ್ಪ, ಷಣ್ಮುಖಪ್ಪ, ದೇವರಾಜ್, ಚಂದು, ಸಾಗರ್ ಇತರರು ಇದ್ದರು.

## ದಾವಣಗೆರೆ-ಹರಿಹರ : ಮಕ್ಕಳ ಅರಿವು

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬಾಲ್ಯವಿವಾಹದಿಂದ ಆಗುವ ದುಷ್ಪರಿಣಾಮಗಳು ಹಾಗು ತಡೆಗಟ್ಟುವ ಕ್ರಮಗಳ ಬಗ್ಗೆ ಅರಿವು ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10 ಗಂಟೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಪನಿರ್ದೇಶಕರ ಕಛೇರಿಯಲ್ಲಿ ಏರ್ಪಡಿಸಲಾಗಿದೆ.

ಮಧ್ಯಾಹ್ನ 2.30 ಗಂಟೆಗೆ ಹರಿಹರದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಗುರುಭವನದಲ್ಲೂ ಸಹ ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆ.

## ವಿಕಲಚೇತನರಿಗೆ ಉದ್ಯೋಗ ಮೇಳ

ದಾವಣಗೆರೆ ಫೆ.22- ಸಮರ್ಥನಂ ಅಂಗವಿಕಲರ ಸಂಸ್ಥೆ ಮತ್ತು ಇಲಾಖೆಯ ಸಂಯುಕ್ತಾಶ್ರಯದಲ್ಲಿ ವಿಕಲಚೇತನರಿಗೆ ಉದ್ಯೋಗ ಮೇಳವನ್ನು ಬೆಂಗಳೂರಿನ ಮ್ಯಾನ್‌ಫೋಬೆಲ್ ಹೋಟೆಲ್ ಹಾಗೂ ಕನ್ವೆನ್ಷನ್ ಸೆಂಟರ್‌ನಲ್ಲಿ ಇದೇ ದಿನಾಂಕ 25 ರಂದು ಆಯೋಜಿಸಲಾಗಿದೆ. ವಿವಿಧ 40 ಕಂಪನಿಗಳು ಮೇಳದಲ್ಲಿ ಭಾಗವಹಿಸಲಿವೆ. ಜಿಲ್ಲೆಯ ಆಸಕ್ತ ವಿಕಲಚೇತನರು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವೀರಭದ್ರ ಪಾಟೀಲ್ (6364867795) (placements@samarthanam.org) ಸುಭಾಷ್: 9449864693 (centerheadBangalore@samarathanam.org) ಅನ್ನು ಸಂಪರ್ಕಿಸಬಹುದು.

# ತಿಳುವಳಿಕೆಯೊಂದಿಗೆ ಅಳವಡಿಕೆ ಕೌಶಲ್ಯವೂ ಅವಶ್ಯ




**ಬಾಪೂಜಿ ಎಂ. ಬಿ. ಎ. ಸಂಸ್ಥಾಪನಾ ದಿನಾಚರಣೆಯಲ್ಲಿ ಅಜಯ್ ಕುಮಾರ್ ಗುಪ್ತ**

ದಾವಣಗೆರೆ, ಫೆ. 22- ತಂತ್ರಜ್ಞಾನವಾಗಲೀ, ವಾಣಿಜ್ಯ ಜ್ಞಾನವಾಗಲೀ, ನಿರ್ವಹಣಾ ಜ್ಞಾನವಾಗಲೀ ತಿಳುವಳಿಕೆ ಇದ್ದರೆ ಸಾಲದು, ಅಳವಡಿಕೆಯ ಕೌಶಲ್ಯವೂ ಅವಶ್ಯ ಎಂದು ಗ್ರಾಸಿಮ್ ಕೈಗಾರಿಕೆಯ ವಿಭಾಗದ ಮುಖ್ಯಸ್ಥ, ಹಿರಿಯ ಅಧ್ಯಕ್ಷ ಅಜಯ್ ಕುಮಾರ್ ಗುಪ್ತ ಹೇಳಿದರು.

ಬಾಪೂಜಿ ಮ್ಯಾನೇಜ್ಮೆಂಟ್ ಕಾಲೇಜಿನ 25 ನೇ ಸಂಸ್ಥಾಪನಾ ದಿನ ಹಾಗೂ ನೂತನ ವಿದ್ಯಾರ್ಥಿಗಳಿಗೆ ಸ್ವಾಗತ ಕೋರುವ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಯಶಸ್ಸಿನ ಗಾಥೆ ಆಗಬೇಕೆಂದರೆ ಮೊದಲು ವೈಯಕ್ತಿಕ ಛಾಪು ಮೂಡಿಸಬೇಕು. ನಂತರ ಸಂಸ್ಥೆಯ ಛಾಪು ಮೂಡಿಸಬೇಕು, ಅದಕ್ಕೂ ಪೂರ್ವವಾಗಿ ಏನು ಸಾಧಿಸಬೇಕೆಂಬುದುರ ಸ್ಪಷ್ಟ ಅರಿವು ಬೇಕು. ನಂತರ ಅದಕ್ಕೆ ಪೂರಕವಾಗಿ ಏನು ಮಾಡಬೇಕೆಂಬುದರ ಅರಿವನ್ನು ಸಹವರ್ತಿಗಳಿಗೆ ಕೊಡಬೇಕು ಎಂದು ಮ್ಯಾನೇಜ್ಮೆಂಟ್ ವಿದ್ಯಾರ್ಥಿಗಳಿಗೆ ಕರೆಕೊಟ್ಟರು.

ಮತ್ತೋರ್ವ ಮುಖ್ಯ ಅತಿಥಿ, ಹರಿಹರದ ಸಿಂಥೆಟಿಕ್ ಇಂಡಸ್ಟ್ರೀಸ್ ನ ಜನರಲ್ ಮ್ಯಾನೇಜರ್ ಎಲ್.ಕೆ. ನಾಗರಾಜ್ ಮಾತನಾಡಿ, ಸಂವಹನ ಕೌಶಲ್ಯ, ಮಾನವ ಸಂಪನ್ಮೂಲ ಬಳಕೆ, ನಾಯಕತ್ವ ಗುಣ ಅತ್ಯವಶ್ಯ. ಅಂಕ ಗಳಿಕೆಗೆ ಕೊಡುವಷ್ಟೇ ಗಮನವನ್ನು ಕೈಗಾರಿಕಾ ಕೌಶಲ್ಯಕ್ಕೂ ಕೊಡಬೇಕು. ಅದರಲ್ಲೂ ಬಹುಮುಖ, ಬಹುವಿಧ ಕೌಶಲ್ಯಗಳು ಬೇಕು ಎಂದರು.

ಉದ್ಘಾಟನಾ ನುಡಿಗಳನ್ನಾಡಿದ ಬಾಪೂಜಿ ತಾಂತ್ರಿಕ ಮತ್ತು ತಂತ್ರಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಹೆಚ್. ಬಿ. ಅರವಿಂದ್, ಆಲೋಚನೆಗಳು ಸ್ಥಳೀಯ ಸಮಸ್ಯೆಗಳ ಮಿತಿಯಲ್ಲಿದ್ದರೂ ಕಾರ್ಯಾನುಷ್ಠಾನ ಜಾಗತಿಕ ಸಮಸ್ಯೆಗಳ ನಿವಾರಣಾ ಮಟ್ಟದ್ದಾಗಿರಬೇಕು, ನೂತನ ಶಿಕ್ಷಣ ನೀತಿಯಲ್ಲಿ ಕಲಿಕೆಯು ಪರೀಕ್ಷೆ ಬರೆಯುವುದಕ್ಕಷ್ಟೇ ಅಲ್ಲ, ಜ್ಞಾನ ಸಂಪಾದನೆಗೆ ಎಂದರು.

ಕಾಲೇಜಿನ ಚೇರ್ಮನ್ ಅಥಣಿ ಎಸ್. ವೀರಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಬದಲಾಗುತ್ತಿರುವ ತಂತ್ರಜ್ಞಾನದ ಸವಾಲು ಎದುರಿಸಿ ಸಾಧನೆ ಮಾಡಲು ನಿತ್ಯ ಕಲಿಕೆ ಅವಶ್ಯ, ಪ್ರಸ್ತುತ ಔದ್ಯಮಿಕ ರಂಗವು ಗ್ರಾಹಕ ಪ್ರಧಾನವಾಗಿದ್ದು ಗ್ರಾಹಕರ ಅಭಿರುಚಿಯ, ಅಭಿವೃದ್ಧಿಯ ಅರಿವು ಅವಶ್ಯ ಎಂದರು.

ಪ್ರಾಧ್ಯಾಪಕ ವರ್ಗದ ನವೀನ್ ನಾಗರಾಜ್, ಸುಜಿತ್, ಪ್ರಕಾಶ್, ಡಾ. ಬಿ. ವೀರಪ್ಪ ಉಪಸ್ಥಿತರಿದ್ದರು.

ಕಾಲೇಜಿನ ನಿರ್ದೇಶಕ ಸ್ವಾಮಿ ತ್ರಿಭುವನಾನಂದ ಸ್ವಾಗತಿಸಿದರು. ನಂದಿನಿ ಪ್ರಾರ್ಥಿಸಿದರು. ಸುಹೇಲ್, ಕಿಶನ್ ನಿರೂಪಿಸಿದರು. ಶೃತಿ ವಂದಿಸಿದರು.

# ಟಿವಿ, ಮೊಬೈಲ್‌ಗಳು ಭವಿಷ್ಯ ರೂಪಿಸುವುದಿಲ್ಲ



**ನಂದಿತಾವರೆ ಶಾಲೆಯಲ್ಲಿ ಗಣಕಯಂತ್ರ, ನೋಟ್‌ಬುಕ್ ವಿತರಣಾ ಸಮಾರಂಭದಲ್ಲಿ ಶರಣ್ ಹೆಗಡೆ**

ಮಲೇಬೆನ್ನೂರು, ಫೆ.22- ಮನೆಯಲ್ಲಿನ ಟಿವಿ, ಕೈಯ್ಯಲ್ಲಿರುವ ಮೊಬೈಲ್‌ಗಳು ಭವಿಷ್ಯ ರೂಪಿಸುವುದಿಲ್ಲ ಎಂದು ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್ ಹೆಗಡೆ ಅಭಿಪ್ರಾಯಪಟ್ಟರು.

ಸಮೀಪದ ನಂದಿತಾವರೆ ಬಸವೇಶ್ವರ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ಬೆಂಗಳೂರಿನ ಅನಿತಾ ಗುರು ನೀಡಲಾದ ಗಣಕಯಂತ್ರ ಮತ್ತು ನೋಟ್‌ಬುಕ್‌ಗಳನ್ನು ವಿತರಿಸಿ ಅವರು ಮಾತನಾಡುತ್ತಿದ್ದರು.

ಅಂತಹ ವಸ್ತುಗಳಿಂದ ದೂರವಿದ್ದು ಪುಸ್ತಕದ ಗೆಳೆಯನಾದರೆ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಜೀವನ ಭದ್ರಪಡಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದರು.

ರಾಜ್ಯ ನವ ನಿರ್ಮಾಣ ಸೇನೆಯ ಕಾರ್ಯದರ್ಶಿ ಎಚ್.ಬಿ.ರುದ್ರಗೌಡ ಮಾತನಾಡಿ, ಶಿಸ್ತು ಇದ್ದಲ್ಲಿ ಗ್ರಾಮೀಣ ಮಕ್ಕಳು ಮಿಂಚುವುದು ಕಷ್ಟವೇನಲ್ಲ, ನೋಟ್ ಬುಕ್ ನೀಡಲು ಸಂಘ, ಸಂಸ್ಥೆಗಳ ಮನವೊಲಿಸಿ ಹಲವು ಶಾಲೆಗಳ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಕ ಶರಣ್ ಹೆಗಡೆ ಪ್ರೇರಕ ಶಕ್ತಿಯಾಗಿರುವುದು ತಾಲ್ಲೂಕಿನ ಪುಣ್ಯವಾಗಿದೆ ಎಂದರು.

ಜಿಲ್ಲಾ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಡಿ.ಎಂ.ಮಂಜುನಾಥಯ್ಯ, ಭವ್ಯ ಭಾರತದ ಪ್ರಜೆಗಳಾಗಲು ವಿದ್ಯಾಭ್ಯಾಸದಲ್ಲಿ ವೇಳಾ ಪಟ್ಟಿ ಹಾಕಿ ಅಭ್ಯಾಸ ಮಾಡಬೇಕು. ಅಸಾಧ್ಯ ಯಾವುದೂ ಇಲ್ಲ. ಸಾಧನೆಗೆ ಗುರಿ ಮುಖ್ಯವಾಗಿದೆ. ಆ ಹಂತದಲ್ಲಿ ನಡೆದಲ್ಲಿ ಅಂದುಕೊಂಡದ್ದನ್ನು ಮಾಡುತ್ತೀರಿ ಎಂದು ಹೇಳಿದರು.

ಕುಣೆಬೆಳಕೆರೆ ವೃತ್ತದ ಗ್ರಾಲೆ ದೇವರಾಜ್ ಮಾತನಾಡಿ, ಸೇವಾವಧಿಯಲ್ಲಿರುವತನಕ ಪ್ರತಿ ವರ್ಷವೂ ಹತ್ತನೇ ತರಗತಿಯಲ್ಲಿ ಹೆಚ್ಚು ಅಂಕ ಪಡೆದವರಿಗೆ ಧನಸಹಾಯ ನೀಡುವುದಾಗಿ ಪ್ರಕಟಿಸಿದರು.

ಮುಖ್ಯ ಶಿಕ್ಷಕ ಉಮೇಶ್ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ ಸದಸ್ಯ ಸಂತೋಷ್, ಯುವಜನ ಪ್ರಶಸ್ತಿ ಪುರಸ್ಕೃತ ಸದಾನಂದ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಬಸವನಗೌಡ, ದರ್ಶನ್, ಅನುಷಾ, ವೈಷ್ಣವಿ, ತರುಣ್, ಅಶ್ವಿನಿ, ಶಿಕ್ಷಕರಾದ ನಾಗರಾಜ್, ಸುರೇಶ್ ಮತ್ತಿತರರು ತಮ್ಮ ಅನಿಸಿಕೆ ಹಂಚಿಕೊಂಡರು.

# ಮಲೇಬೆನ್ನೂರಿನಲ್ಲಿ ಮುಂದುವರೆದ ಹಿಜಾಬ್ ವಿವಾದ : ತೆರವಿಗೆ ಒಪ್ಪದ ವಿದ್ಯಾರ್ಥಿನಿಯರು



ಮಲೇಬೆನ್ನೂರು, ಫೆ.22- ಹಿಜಾಬ್ ತೆರವು ಮಾಡುವುದಿಲ್ಲ ಎಂದು ಹಠ ಹಿಡಿದ 12 ವಿದ್ಯಾರ್ಥಿನಿಯರಿಗೆ ಮಂಗಳವಾರವೂ ತರಗತಿಗೆ ಪ್ರವೇಶವನ್ನು ನಿರಾಕರಿಸಿದ ಘಟನೆ ಮಲೇಬೆನ್ನೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯಿತು.

ಪ್ರಥಮ ಪಿಯುಸಿಯ 12 ವಿದ್ಯಾರ್ಥಿನಿಯರು ನಾವು ಹಿಜಾಬ್ ತೆಗೆಯುವುದಿಲ್ಲ ಎಂದು ಪಟ್ಟು ಹಿಡಿದಾಗ ಕಾಲೇಜಿನ ಪ್ರಾಚಾರ್ಯ ರಂಗಪ್ಪ ಅವರು ಹಿಜಾಬ್ ತೆರವು ಮಾಡದ ಹೊರತು ತರಗತಿಗೆ ಪ್ರವೇಶ ಇಲ್ಲ ಎಂಬುದನ್ನು ಸ್ಪಷ್ಟಪಡಿಸಿದರು.

ಇದಕ್ಕೂ ಮುನ್ನ ಕಾಲೇಜಿನ ಪ್ರಾಚಾರ್ಯ ರಂಗಪ್ಪ, ಪಿಎಸ್‌ಐ ರವಿಕುಮಾರ್ ಮತ್ತು ಉಪನ್ಯಾಸಕರು ಪ್ರತಿದಿನ ಹೀಗೆ ಹಠ ಮಾಡಬೇಡಿ, ಪರಿಸ್ಥಿತಿಗೆ ಹೊಂದಿಕೊಂಡು ಸರ್ಕಾರದ ಆದೇಶವನ್ನು ಪಾಲಿಸಿ ಎಂದು ಎಷ್ಟೇ ಮನವರಿಕೆ ಮಾಡಿದರೂ ವಿದ್ಯಾರ್ಥಿನಿಯರು ಮಾತ್ರ ಮನಸ್ಸು ಬದಲಿಸಲಿಲ್ಲ.

ಕಾಲೇಜು ಸಮಯ ಮುಗಿಯುವವರೆಗೂ ಗೇಟ್‌ನಿಂದ ಹೊರಗಡೆ ಇದ್ದ ವಿದ್ಯಾರ್ಥಿನಿಯರು, ನಂತರ ಮನೆಗೆ ತೆರಳಿದರು. ವಿಶೇಷ ಎಂದರೆ ಸೋಮವಾರ ವಿದ್ಯಾರ್ಥಿನಿಯರನ್ನು ಬೆಂಬಲಿಸಿ ತರಗತಿ ಬಹಿಷ್ಕರಿಸಿದ್ದ ವಿದ್ಯಾರ್ಥಿಗಳು ಇವತ್ತು ತರಗತಿಗೆ ತೆರಳಿದ್ದರು.

ಜನತಾವಾಣಿ
ಏಜೆಂಟರು ಬೇಕಾಗಿದ್ದಾರೆ
ಚನ್ನಗಿರಿ, ಸಂತೇಬೆನ್ನೂರು, ಕೆರೆಬಿಳಚಿ, ದಾಗಿನಕಟ್ಟೆ, ನಲ್ಲೂರಿನಲ್ಲಿ ಜನತಾವಾಣಿ ಪತ್ರಿಕೆ ವಿತರಿಸಲು ಕೇವಣಿ ಇಡಬಲ್ಲ, ಆಸಕ್ತ ಏಜೆಂಟರು ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಬೆಳಿಗ್ಗೆ 11.00 ರಿಂದ 5.30ರವರೆಗೆ
ಫೋ.: 08192 254736

# ಜಲ ಜೀವನ್ ಕಾರ್ಯರೂಪಕ್ಕೆ ಪ್ರಾಮಾಣಿಕವಾಗಿ ಶ್ರಮಿಸಿ

## ಗ್ರಾ.ಪಂ. ಕುಡಿಯುವ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರಿಗೆ ಜಿ.ಪಂ. ಸಿಇಒ ಕರೆ

ದಾವಣಗೆರೆ, ಫೆ.22- ಜಲಜೀವನ್ ಮಿಷನ್ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಪ್ರಾಮಾಣಿಕವಾಗಿ ಶ್ರಮಿಸುವಂತೆ ಗ್ರಾಮ ಪಂಚಾಯ್ತಿಯ ಕುಡಿಯುವ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರಿಗೆ ಜಿಲ್ಲಾ ಪಂಚಾಯ್ತಿ ಸಿಇಒ ಡಾ. ವಿಜಯ ಮಹಾಂತೇಶ್ ದಾನಮ್ಮನವರ್ ಕರೆ ನೀಡಿದರು.

ಸೊಸೈಟಿ ಫಾರ್ ಪೀಪಲ್ಸ್ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಸಹಯೋಗದಲ್ಲಿ ನಗರದ ಹೊರ ವಲಯದಲ್ಲಿರುವ ಜೆನಿಸಿಸ್ ರಿಟ್ರೀಟ್ ಹೋಟೆಲ್‌ನಲ್ಲಿ ಜಲ ಜೀವನ್ ಮಿಷನ್ ಕುರಿತು ಗ್ರಾಮ ಪಂಚಾಯಿತಿ ಹಾಗೂ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರಿಗೆ 4 ದಿನಗಳ ಕಾಲ ಹಮ್ಮಿಕೊಂಡಿರುವ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಜಲಜೀವನ್ ಮಿಷನ್ ಯೋಜನೆ ಅನುಷ್ಠಾನ ಕಾಮಗಾರಿಗಳು ಜಿಲ್ಲೆಯಲ್ಲಿ ತ್ವರಿತಗತಿಯಲ್ಲಿ ಸಾಗಿದ್ದು, 2024 ರೊಳಗೆ ಜಿಲ್ಲೆಯ ಎಲ್ಲಾ ಕಂದಾಯ ಮತ್ತು ಜನವಸತಿ ಗ್ರಾಮಗಳ ಮನೆ ಮನೆಗೆ ಶುದ್ಧ ಕುಡಿಯುವ ನೀರು ಒದಗಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

ಯೋಜನೆ ಮೂಲಕ ಪ್ರತಿ ಮನೆ ಮನೆಗೂ ನೀರು ಒದಗಿಸುವ ಉದ್ದೇಶದಿಂದ ಕಾರ್ಯಗಾರ ಆಯೋಜನೆ ಮಾಡಲಾಗಿದೆ. ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸುವಲ್ಲಿ ಅಧಿಕಾರಿಗಳ ಪಾತ್ರದ ಜೊತೆಗೆ ಜನಸಮುದಾಯಗಳ ಸಹಕಾರ ಮುಖ್ಯವಾಗಿದೆ. ಜಲ ಜೀವನ್ ಮಿಷನ್ ಯೋಜನೆಯಿಂದ ನೀರು ಒದಗಿಸುವುದು ಮಾತ್ರವಲ್ಲದೆ ವಿದ್ಯುಚ್ಛಕ್ತಿಯ ಉಳಿತಾಯವೂ ಆಗಲಿದೆ ಎಂದರು.



ಬದುಕಿಗೆ ನೀರು ಅತೀ ಮುಖ್ಯವಾಗಿದ್ದು, ನೀರಿನ ಬಗ್ಗೆ ಕಾಳಜಿವಹಿಸುವುದು ಅವಶ್ಯಕವಾಗಿದೆ. ಜನಸಂಖ್ಯೆ ಹೆಚ್ಚಾದಂತೆ ನೀರಿನ ಬವಣೆ ಹೆಚ್ಚುತ್ತಿದೆ. ರಾಜಸ್ಥಾನ ಬಿಟ್ಟರೆ ಕರ್ನಾಟಕವೇ ಅತೀ ಹೆಚ್ಚು ಬರಕ್ಕೆ ತುತ್ತಾಗಿದ್ದನ್ನು ನಾವು ಕಾಣಬಹುದು ಎಂದರು.

ಗ್ರಾಮೀಣ ಭಾಗದಲ್ಲಿ ಬಡಜನರು ದುಡಿಯಲು ಮೀಸಲಿಟ್ಟ ಸಮಯವನ್ನು ನೀರು ತರಲು ವ್ಯರ್ಥ ಮಾಡುತ್ತಿದ್ದಾರೆ. ಕಲುಷಿತ ನೀರಿನಿಂದ ಅನೇಕ ಸಾಂಕ್ರಾಮಿಕ ರೋಗಗಳು ಬರುವ ಸಾಧ್ಯತೆಗಳಿರುವ ಕಾರಣದಿಂದಾಗಿಯೇ ಪ್ರಧಾನ ಮಂತ್ರಿಗಳು ಜಲ ಜೀವನ್ ಮಿಷನ್ ಯೋಜನೆ ಘೋಷಿಸಿದರು. ಈ ಮೂಲಕ ದೇಶಾದ್ಯಂತ 18 ಕೋಟಿ ಕುಟುಂಬಗಳಿಗೆ 3.5 ಲಕ್ಷ ಕೋಟಿ ರೂ. ವೆಚ್ಚಮಾಡಿ ಮನೆ ಮನೆಗೂ ನೀರನ್ನು ಒದಗಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ದೇಶದಲ್ಲಿ ಈಗಾಗಲೇ 2 ಕೋಟಿ ಮನೆಗಳಿಗೆ ಜಲ ಜೀವನ್ ಮಿಷನ್ ಮೂಲಕ ನೀರು ಒದಗಿಸಲಾಗಿದೆ ಎಂದರು.

### 2024ಕ್ಕೆ ಎಲ್ಲಾ ಮನೆಗಳಿಗೂ ನೀರು : ಜಿ.ಪಂ. ಸಿಇಒ

**ಜಿಲ್ಲೆಯಲ್ಲಿ 693 ಕಂದಾಯ ಗ್ರಾಮಗಳು ಮತ್ತು 876 ಜನವಸತಿ ಪ್ರದೇಶಗಳಿವೆ. ಇದರಲ್ಲಿ 2020-21ನೇ ಸಾಲಿನಲ್ಲಿ 356 ಗ್ರಾಮ ಪಂಚಾಯಿತಿಗಳಲ್ಲಿ ಕಾಮಗಾರಿ ಆರಂಭಿಸಿದ್ದು, 161 ಗ್ರಾಮಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಉಳಿದವುಗಳ ಕಾಮಗಾರಿ ಪ್ರಗತಿಯಲ್ಲಿದೆ. 2021-22ನೇ ಸಾಲಿನಲ್ಲಿ 125 ಕಾಮಗಾರಿಗಳಲ್ಲಿ 90 ಕಾಮಗಾರಿಗಳು ಪೂರ್ಣಗೊಂಡಿದ್ದು 35 ಪ್ರಗತಿಯಲ್ಲಿವೆ. 2024 ರೊಳಗೆ ಜಿಲ್ಲೆಯ ಎಲ್ಲಾ ಮನೆಗಳಿಗೂ ನೀರು ಒದಗಿಸುವ ಗುರಿ ಹೊಂದಲಾಗಿದೆ ಎಂದರು.**

ಕೆ.ಪ್ರಕಾಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ಮಲ್ಲಿಕಾರ್ಜುನಯ್ಯ, ಜಿಲ್ಲಾ ಯೋಜನಾ ನಿರ್ದೇಶಕ ಜಗದೀಶ್, ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳು, ಉಪಾಧ್ಯಕ್ಷರು, ಸದಸ್ಯರು ಪಾಲ್ಗೊಂಡಿದ್ದರು.

# ಹರಪನಹಳ್ಳಿ : ಮಹಿಳೆಯರು ಮೂಢನಂಬಿಕೆಯಿಂದ ಹೊರ ಬರಬೇಕು

ಹರಪನಹಳ್ಳಿ, ಫೆ.22- ಮಹಿಳೆಯರು ಮೂಢನಂಬಿಕೆ ಯಿಂದ ಹೊರಬಂದು ಸಮಾಜದಲ್ಲಿ ಸಮಾನತೆಯ ಜೀವನ ರೂಪಿಸಿಕೊಳ್ಳಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಎ.ಭಾರತಿ ಕರೆ ನೀಡಿದರು.



### ಹಿರಿಯ ಸಿವಿಲ್ ನ್ಯಾ|| ಎ.ಭಾರತಿ ಕರೆ

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹರಪನಹಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ 'ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಸಮಾನತೆಯಿಂದ ನೋಡಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ, ಜೀತ ಪದ್ಧತಿ ಹೋಗಲಾಡಿಸಲು ಆಗಿನ ಕಾಲದಲ್ಲಿ ಅನೇಕ ಹೋರಾಟ ಮಾಡಿದವರಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ. ಆರ್.ಅಂಬೇಡ್ಕರ್ ಒಬ್ಬರು. ನಾವುಗಳು ಅವರ ಅನುಯಾಯಿಗಳಾಗಿ ನಡೆದಾಗ ಮಾತ್ರ ದೇಶಕ್ಕೆ ಸಮಾನತೆಯಿಂದ ನಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಮಹಿಳೆಯರಿಗೆ ಆಸ್ತಿಯಲ್ಲಿ ಸಮಾನ ಹಕ್ಕು ಇದೆ. ಸಮಾನತೆಯಿಂದ ಬಾಳಬೇಕಾದರೆ ಅವರವರ ಹಕ್ಕಿಗಾಗಿ ಹೋರಾಡಿದಾಗ ಮಾತ್ರ ದೇಶದಲ್ಲಿ ಸಮಾನತೆಯ ಹಕ್ಕು ಪಡೆದು ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಕೆ. ಜಗದಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಮಾಜಿಕ ನ್ಯಾಯದಲ್ಲಿ ಪ್ರತಿಯೊಬ್ಬರೂ ಸಮಾನತೆಯಿಂದ ನಡೆದುಕೊಂಡು ಸಾಗಬೇಕಿದೆ. ಜಾತಿ ವ್ಯವಸ್ಥೆ ಹೊಗಲಾಡಿಸಲು, ಜಾತ್ಯತೀತವಾಗಿ ನಡೆದಾಗ ಮಾತ್ರ ಹೋಗಲಾಡಿಸುವುದಕ್ಕೆ ಸಾಧ್ಯವಾಗುತ್ತದೆ.

ದೇಶದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಬರೆದ ಸಂವಿಧಾನದಿಂದ ಸಹೋದರತ್ವದಿಂದ ಬಾಳಬೇಕಾಗಿದೆ. ಈ ಹಿಂದೆ ಅನೇಕ ಅಹಿತಕರ ಘಟನೆಗಳು ನಡೆದು ಹೋಗಿವೆ. ಆ ಘಟನೆಗಳನ್ನು ಬದಿಗೊತ್ತಿ ಸಮಾಜದಲ್ಲಿ ಎಲ್ಲರೂ ಒಂದೇ ಎಂಬ ಮನೋಭಾವದಿಂದ ಜೀವನ ಮಾಡಬೇಕೆಂದರು.

ಸಿವಿಲ್ ಕಿರಿಯ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ, ವಕೀಲರ ಸಂಘದ ಉಪಾಧ್ಯಕ್ಷ ಡಿ.ಬಿ. ವಾಸುದೇವ, ಕಾರ್ಯದರ್ಶಿ ಎಸ್.ಜಿ.ತಿಪ್ಪೇಸ್ವಾಮಿ, ಜಂಟಿ ಕಾರ್ಯದರ್ಶಿ ನಾಗೇಂದ್ರಪ್ಪ, ಅಪರ ಸರ್ಕಾರಿ ವಕೀಲ ವಿ.ಜಿ.ಪ್ರಕಾಶ್‌ಗೌಡ, ಸರಕಾರಿ ಅಭಿಯೋಜಕರಾದ ಎನ್. ಮೀನಾಕ್ಷಿ, ಡಿ. ನಿರ್ಮಲ, ವಕೀಲರಾದ ಎಂ.ಮೃತ್ಯುಂಜಯ, ನಂದೀಶ್ ನಾಯ್ಕ ಮುತ್ತಿಗಿ, ಮಂಜಣ್ಣ, ರವಿಶಂಕರ್, ಡಿ. ಹನುಮಂತಪ್ಪ, ನ್ಯಾಯಾಲಯದ ರೇವಣಸಿದ್ದಪ್ಪ, ಬಸವರಾಜ, ಕೊಟ್ರೇಶ್ ಇತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, ಕರೂರು ಇಂಡಸ್ಟ್ರಿಯಲ್ ಏರಿಯಾ, ಡಿ.ಸಿ. ಕಛೇರಿ, ಜಿ.ಎಂ.ಐ.ಟಿ., ರಶ್ಮಿ ಹರಿಹರ ರಸ್ತೆ, ವಿಜಯ ನಗರ, ಅಶೋಕ ನಗರ, ಆರ್. ಟಿ.ಓ. ಕಛೇರಿ, ಎಸ್.ಪಿ. ಕಛೇರಿ, ರಿಂಗ್ ರಸ್ತೆ, ಶಿಬಾರ, ಎಸ್.ಎಂ.ಕೆ. ನಗರ ಹಾಗೂ ನೀಲಾನಹಳ್ಳಿ, ಹಳೇಬಾತಿ, ನಾರಾಯಣ ಕ್ಯಾಂಪ್ ಗ್ರಾಮಗಳು ಹಾಗೂ ಇತರೆ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಹಾಗೂ ಹೆಚ್.ಕೆ.ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ಬಡಾವಣೆ ಹಾಗೂ ಇ.ಎಸ್.ಐ. ಆಸ್ಪತ್ರೆ ಕೆ.ಟಿ.ಜೆ ನಗರ ಪೋಲಿಸ್ ಠಾಣೆ, ಸ್ಮಾರ್ಟ್ ಸಿಟಿ ಆಫೀಸ್ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಇರುವುದಿಲ್ಲ.

# ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸಿ

ಚನ್ನಗಿರಿ, ಫೆ.22- ಜನಸಂಖ್ಯೆಗೆ ಅನುಗುಣವಾಗಿ ರಾಜ್ಯದಲ್ಲಿ ಪರಿಶಿಷ್ಟ ಪಂಗಡಕ್ಕೆ ಮೀಸಲಾತಿಯನ್ನು ಹೆಚ್ಚಿಸಬೇಕೆಂದು ಆಗ್ರಹಿಸಿ, ವಾಲ್ಮೀಕಿ ನಾಯಕ ಸಮಾಜದಿಂದ ಚನ್ನಗಿರಿಯಲ್ಲಿ ನಿನ್ನೆ ಬೃಹತ್ ಪ್ರತಿಭಟನೆಯನ್ನು ನಡೆಸಿ ತಹಶೀಲ್ದಾರ್‌ರಿಗೆ ಮನವಿ ಸಲ್ಲಿಸಲಾಯಿತು.



### ಚನ್ನಗಿರಿಯಲ್ಲಿ ವಾಲ್ಮೀಕಿ ನಾಯಕ ಸಮಾಜದಿಂದ ಪ್ರತಿಭಟನೆ

ಇಲ್ಲಿನ ವಾಲ್ಮೀಕಿ ಭವನದಿಂದ ಆರಂಭಿಸಿ, ಪಟ್ಟಣದ ಪ್ರಮುಖ ರಸ್ತೆಗಳ ಮುಖಾಂತರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ನಾಯಕ ಸಮಾಜ ಬಾಂಧವರು ಜನ ಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ನೀಡಬೇಕೆಂದು ಆಗ್ರಹಿಸಿದರು.

ವಾಲ್ಮೀಕಿ ಗುರುಪೀಠದ ಜಗದ್ಗುರುಗಳಾದ ಶ್ರೀ ಪ್ರಸನ್ನಾನಂದ ಸ್ವಾಮಿ ಯವರು ಅಹೋರಾತ್ರಿ ಧರಣಿ ನಡೆಸುತ್ತಿದ್ದರೂ ಸಹ ಸರ್ಕಾರ ನಿರ್ಲಕ್ಷ್ಯತನ ತೋರುತ್ತಿರುವುದನ್ನು ತೀವ್ರ ವಾಗಿ ಖಂಡಿಸಿ, ಆಕ್ರೋಶ ವ್ಯಕ್ತಪಡಿಸಲಾಯಿತು.

ಕೇಂದ್ರ ಸರ್ಕಾರದ ಮಾದರಿಯಲ್ಲಿ ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಪ್ರಸ್ತುತ ಜಾತಿ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿಯವರಿಗೆ ಶೇ.18 ಪರಿಶಿಷ್ಟ ಪಂಗಡದವರಿಗೆ ಶೇ.9 ರಷ್ಟು ಮೀಸಲಾತಿಯನ್ನು ನೀಡಿ, ಸಾಮಾಜಿಕ ನ್ಯಾಯವನ್ನು ಒದಗಿಸಬೇಕೆಂದು ಆಗ್ರಹಪಡಿಸಿದರು.

ಪ್ರತಿಭಟನಾ ಕಾರ್ಯಕ್ರಮದಲ್ಲಿ ಜಿಲ್ಲಾ ನಾಯಕ ಸಮಾಜ ಅಧ್ಯಕ್ಷ ಬಿ. ವೀರಣ್ಣ, ಚನ್ನಗಿರಿ ತಾಲ್ಲೂಕು ನಾಯಕ ಸಮಾಜ ಅಧ್ಯಕ್ಷ ಹೊದಿಗೆರೆ ರಮೇಶ, ನಾಯಕ ವಿದ್ಯಾರ್ಥಿ ನಿಲಯದ ನಿರ್ದೇಶಕರು ಗಳಾದ ಎನ್.ಎಂ. ಆಂಜನೇಯ ಗುರೂಜಿ, ಎ.ಬಿ.ರಾಮ ಚಂದ್ರಪ್ಪ, ಜಯಪ್ಪ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಎನ್.ಲೋಕೇಶ್ವರ್, ತ್ಯಾವಣಿಗೆ ಗೋವಿಂದಸ್ವಾಮಿ, ಲೋಹಿತ್ ಕುಮಾರ್, ಜ್ಞಾನೇಶ್ ಹಾಗೂ ಇನ್ನಿತರರು ಭಾಗವಹಿಸಿದ್ದರು.

# ಗಮನ ಸೆಳೆದ ಕಾಲಶಸ್ತ್ರ, ಸರಪಳಿ ಪವಾಡಗಳು



**ದೇವರಬೆಳಕೆರೆ**

ಮಲೇಬೆನ್ನೂರು, ಫೆ.22- ದೇವರಬೆಳಕೆರೆ ಗ್ರಾಮದಲ್ಲಿ ಶ್ರೀ ಮೈಲಾರ ಲಿಂಗೇಶ್ವರ ರಥೋತ್ಸವದ ಅಂಗವಾಗಿ ಮಂಗಳವಾರ ಸಂಜೆ ಜರುಗಿದ ಕಾಲಶಸ್ತ್ರ, ತ್ರಿಶೂಲ ಮತ್ತು ಸರಪಳಿ ಪವಾಡಗಳು ಎಲ್ಲರ ಗಮನ ಸೆಳೆದವು. ನಂತರ ಓಕುಳಿಯೊಂದಿಗೆ ಜಾತ್ರೆಗೆ ತೆರೆ ಎಳೆಲಾಯಿತು.

# ಶಾಸಕ ಬಿ.ಆರ್. ಪಾಟೀಲ್‌ಗೆ 'ಕಿಸಾನ್ ರತ್ನ' ಪ್ರಶಸ್ತಿ ಪ್ರದಾನ

ನವದೆಹಲಿ, ಫೆ.22- ಆಳಂದ ಕ್ಷೇತ್ರದ ಮಾಜಿ ಶಾಸಕ, ಕಾಂಗ್ರೆಸ್ ಮುಖಂಡ ಬಿ.ಆರ್. ಪಾಟೀಲ್ ಅವರಿಗೆ ಮಹಾರಾಷ್ಟ್ರದ ಕಿಸಾನ್ ವಿಜಯೋತ್ಸವ ಸಮಿತಿ 'ಕಿಸಾನ್ ರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ.



ಮಂಗಳವಾರ ಕಾನ್‌ಸ್ಟಿಟ್ಯೂಷನ್ ಕ್ಲಬ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಬಿ. ಆರ್. ಪಾಟೀಲ್ ಅವರೊಂದಿಗೆ ರೈತಪರ ಮುಖಂಡರಾದ ರಾಕೇಶ್ ಟಿಕಾಯತ್, ಯೋಗೇಂದ್ರ ಯಾದವ್, ಅಶೋಕ್ ದಾವ್ಲೆ, ಡಾ.ದರ್ಶನ್ ಪಾಲ್, ಹನನ್ ಮುಲ್ಲಾ, ವಿನಾಯಕರಾವ್ ಮುಲ್ಲಾ ಮತ್ತಿತರರಿಗೆ ನಿವೃತ್ತ ನ್ಯಾಯಮೂರ್ತಿ ಕೊಳಸೆ ಪಾಟೀಲ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಕೇಂದ್ರ ಜಾರಿಗೆ ತಂದಿದ್ದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯ ಗಡಿಯಲ್ಲಿ ಒಂದು ವರ್ಷದವರೆಗೆ ನಡೆಸಲಾದ ಪ್ರತಿಭಟನೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಮುಖಂಡರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಮಿತಿ ತಿಳಿಸಿದೆ.

# 24 ರಂದು ಖೋ-ಖೋ ತಂಡಗಳ ಆಯ್ಕೆ ಪ್ರಕ್ರಿಯೆ

ದಾವಣಗೆರೆ, ಫೆ. 22 - ಖೋ-ಖೋ ಫ್ರೆಂಡ್ಸ್ ಗ್ರೂಪ್ ದಾವಣಗೆರೆ ಇವರ ವತಿಯಿಂದ ಜಿಲ್ಲೆಯ ಪುರುಷರ ವಿಭಾಗದ ಖೋ- ಖೋ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆಯನ್ನು ನಾಡಿದ್ದು ದಿನಾಂಕ 24 ರಂದು ಸಂಜೆ 4 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಸಲಾಗುವುದು.

ಮಾರ್ಚ್ 6 ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ಪುರುಷರ ವಿಭಾಗದ ಖೋ-ಖೋ ಜಿಲ್ಲಾ ಲೀಗ್ ಪಂದ್ಯಾವಳಿ ನಡೆಯಲಿದ್ದು, ಇದಕ್ಕೆ ಪೂರ್ವಭಾವಿಯಾಗಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

ವಿವರಕ್ಕೆ ಕೆ.ರವಿ (96207-24806), ಎ.ಬಿ. ಸಿದ್ದೇಶ್ (97439-27252), ಕೆ. ಪ್ರವೀಣ (95900-16079), ಮರುಳಸಿದ್ಧಪ್ಪ (81052-62830)ಇವರನ್ನು ಸಂಪರ್ಕಿಸಬಹುದು.

# ಆವರಗೊಳ್ಳದಲ್ಲಿ ಇಂದು

ಶ್ರೀ ವೀರಭದ್ರೇಶ್ವರ ಮಹಾಸ್ವಾಮಿ ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 8 ಗಂಟೆಗೆ ಬಿರುದಾವಳಿಗಳೊಂದಿಗೆ ಉಯ್ಯಾಲೆ ಮಂಟಪದಿಂದ ಸ್ವಾಮಿಯ ಗುಗ್ಗಳದೊಂದಿಗೆ ಶ್ರೀ ರೇವಣ ಸಿದ್ದೇಶ್ವರ, ಶ್ರೀ ಬೀರಲಿಂಗೇಶ್ವರ ಸ್ವಾಮಿಗಳೊಂದಿಗೆ ದೇವಸ್ಥಾನಕ್ಕೆ ಬಿಜಯಂಗೈಯ್ಯುವುದು. ನಾಳೆ ಗುರುವಾರ ಕಂಕಣ ವಿಸರ್ಜನೆ ನಡೆಯುವುದು.

# ಭಾವಸಾರ ತರುಣ ಮಂಡಳದಿಂದ ಶಿವಾಜಿ ಜಯಂತಿ



ದಾವಣಗೆರೆ, ಫೆ. 22- ನಗರದ ಶ್ರೀ ಭಾವಸಾರ ಕ್ಷತ್ರಿಯ ತರುಣ ಮಂಡಳಿ ವತಿಯಿಂದ ಮಹಾರಾಜ ಪೇಟೆ ವಿಠ್ಠಲ ಮಂದಿರದಲ್ಲಿ ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜ ಜಯಂತಿ ಆಚರಿಸಲಾಯಿತು.

ಅಧ್ಯಕ್ಷ ರಘು ಮುಸಳೆ ಮಾತನಾಡಿ, ಮೊಘಲರ ಸಾಮ್ರಾಜ್ಯ ಹಿಮ್ಮೆಟ್ಟಿಸಿ ಯುದ್ಧದಲ್ಲಿ ಗೆದ್ದು ಹಿಂದವಿ ಸ್ವರಾಜ್ಯ ಸ್ಥಾಪನೆ ಮಾಡಿರುವ ಶಿವಾಜಿ ಮಹಾರಾಜ ಇವರ ಇತಿಹಾಸ ಹೇಳುತ್ತದೆ. ಇದು ಕೇವಲ ಒಂದೇ ದಿನಕ್ಕೆ ಆಚರಣೆಯಾಗಬಾರದು. ಇವರ ಆದರ್ಶವನ್ನು ಎಲ್ಲಾ ಯುವಕರು ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು

ದೈವ ಮಂಡಳಿಯ ಗೌರವಾಧ್ಯಕ್ಷ ಡಾ. ಎಂ.ಆರ್. ಜಯಪ್ರಕಾಶ್ ಮಾಳದ್‌ಕರ್, ಕೋಶಾಧ್ಯಕ್ಷ ವಾಗೀಶ್ ಬಾಬು ಗುಜ್ಜರ್, ಶಂಕರ್ ರಾವ್ ನವಲೆ, ಭಜನಾ ಮಂಡಳಿ ಅಧ್ಯಕ್ಷ ನಿಂಗಸ್ವಾಮಿ ರಾವ್ ಖಮಿತ್ಕರ್, ಹ.ಭ.ಪ ಚಂದ್ರಕಾಂತ ವಾದೋನಿ, ವಿಜಯ ಕುಮಾರ್ ವಾದೋನಿ, ಮಾಲತೇಶ್ ಗುಜ್ಜರ್, ಲಖನ್ ಕುಮಾರ್ ಅಂಬೇಕರ್, ವಿನಯ್ ಜಿಂಗಾಡೆ, ವಿಶ್ವನಾಥ ಪುಟಾಣ್ ಕರ್, ರವಿ ಹೆಬ್ಬಾರೆ, ವಿನಾಯಕ ಟೀಕಾರೆ ಉಪಸ್ಥಿತರಿದ್ದರು.

# ವೈದ್ಯರಿಗೆ ಔಷಧ ಕಂಪನಿಗಳು ಕೊಡುಗೆ ನೀಡುವಂತಿಲ್ಲ : ಸುಪ್ರೀಂ

ನವದೆಹಲಿ, ಫೆ. 22 – ಔಷಧ ಕಂಪನಿಗಳು ತಮ್ಮ ಮಾರಾಟ ಹೆಚ್ಚಿಸಿಕೊಳ್ಳಲು ವೈದ್ಯರಿಗೆ ಕೊಡುಗೆ ನೀಡುವುದನ್ನು ನಿಷೇಧಿಸಲಾಗಿದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ವೈದ್ಯರಿಗೆ ನೀಡುವ ಉತ್ತೇಜಕಗಳಿಗೆ ಆದಾಯ ತೆರಿಗೆ ವಿನಾಯಿತಿ ನೀಡಬೇಕೆಂಬ ಮನವಿ ತಳ್ಳಿ ಹಾಕಿದೆ. ಉಚಿತ ಕೊಡುಗೆ ಹೆಸರಿನಲ್ಲಿ ವೈದ್ಯರು ಔಷಧಿಗೆ ನೀಡುವ ಶಿಫಾರಸ್ಸಿನ ಮೇಲೆ ಪ್ರಭಾವ ಬೀರುವುದು ಗಂಭೀರ ವಿಷಯ ಎಂದು ನ್ಯಾಯಾಲಯ ಹೇಳಿದೆ.

# ಹರಿಹರ ತಾಲ್ಲೂಕು ರಸ್ತೆಗಳ ಅಭಿವೃದ್ಧಿಗೆ 33 ಕೋಟಿ ಅನುದಾನ

ದಾವಣಗೆರೆ, ಫೆ.22- ಹರಿಹರ ವಿಧಾನಸಭಾ ಕ್ಷೇತ್ರದ ಜಿಲ್ಲಾ ಮುಖ್ಯ ರಸ್ತೆ ಹಾಗೂ ರಾಜ್ಯ ಹೆದ್ದಾರಿಗಳ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಯಿಂದ 33 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ವಾರದೊಳಗೆ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ.



ರಾಜ್ಯ ಹೆದ್ದಾರಿ ಸೇತುವೆಗಳ ಸುಧಾರಣೆಗಳ ಲೆಕ್ಕಶೀರ್ಷಿಕೆಯಡಿ ಎಕ್ಕೆಗೊಂದಿ-ನಂದಿಗುಡಿ ರಸ್ತೆಯನ್ನು ಎಕ್ಕೆಗೊಂದಿ ಕ್ರಾಸ್‌ನಿಂದ ಭಾನುವಳ್ಳಿಯವರೆಗೆ ಅಭಿವೃದ್ಧಿಪಡಿಸಲು 13.50 ಕೋಟಿ ಒದಗಿಸಲಾಗಿದೆ. ಚಿಕ್ಕಬಿದರೆ-ಕಕ್ಕರಗೊಳ್ಳದವರೆಗಿನ ರಸ್ತೆ ಅಭಿವೃದ್ಧಿಪಡಿಸಲು 10 ಕೋಟಿ ರೂ. ಅನುದಾನ ನೀಡಲಾಗಿದೆ.

ರಾಜ್ಯ ರಸ್ತೆ ನಿರ್ವಹಣೆ ಲೆಕ್ಕಶೀರ್ಷಿಕೆಯಡಿ ಹೊಸಪೇಟೆ-ಶಿವಮೊಗ್ಗ ರಾಜ್ಯ ಹೆದ್ದಾರಿಯ ಆಯ್ದ ಭಾಗಗಳಲ್ಲಿ ಅಭಿವೃದ್ಧಿಪಡಿಸಲು 7 ಕೋಟಿ ರೂ., ಜಿಲ್ಲಾ ಮುಖ್ಯರಸ್ತೆ ಅಭಿವೃದ್ಧಿಗಾಗಿ 1 ಕೋಟಿ, ಹೆಚ್.ಎಂ. ರಸ್ತೆಯಿಂದ ಕೊಂಡಜ್ಜಿ ಮುಖಾಂತರ ಅರಸೀಕರೆಗೆ ಹೋಗುವ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು 5 ಕೋಟಿ ರೂ. ಅನುದಾನವನ್ನು ನೀಡಲಾಗಿದೆ ಎಂದು ಹೇಳಿದ್ದಾರೆ.

ತಾಲ್ಲೂಕಿನ ರಸ್ತೆಗಳ ಅಭಿವೃದ್ಧಿಗೆ ಕಾಳಜಿವಹಿಸಿ ಅನುದಾನ ಬಿಡುಗಡೆ ಮಾಡಿದ ಈ ಹಿಂದೆ ಲೋಕೋಪಯೋಗಿ ಸಚಿವರಾಗಿದ್ದ ಗೋವಿಂದ ಕಾರಜೋಳ ಹಾಗೂ ಹಾಲಿ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ್ ಅವರನ್ನು ಸಂಸದರು ಅಭಿನಂದಿಸಿದ್ದಾರೆ.

# ಆರ್‌ಜೆ ರಚನಾ ನಿಧನ

ಬೆಂಗಳೂರು, ಫೆ.22- ಖ್ಯಾತ ರೇಡಿಯೋ ಜಾಕಿ ರಚನಾ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.



ಜೆ.ಪಿ ನಗರದ ಅಪಾರ್ಟ್ ಮೆಂಟ್ ವೊಂದರಲ್ಲಿ ವಾಸವಾಗಿದ್ದ ಅವರಿಗೆ ಕಾರ್ಡಿಯಾಕ್ ಅರೆಸ್ಟ್ (ಹೃದಯಾಘಾತ) ಆಗಿದ್ದು, ಆಸ್ಪತ್ರೆಗೆ ಕರೆದುಕೊಂಡು ಹೋಗುವ ವೇಳೆ ನಿಧನರಾಗಿದ್ದಾರೆ. ಅವರಿಗೆ 35 ವರ್ಷ ವಯಸ್ಸಾಗಿತ್ತು.

ಈ ಹಿಂದೆ ರಕ್ಷಿತ್ ಶೆಟ್ಟಿಯವರ 'ಸಿಂಪಲ್ಲಾಗಿ ಒಂದು ಲವ್ ಸ್ಟೋರಿ' ಚಿತ್ರದಲ್ಲಿ ಸಹೋದರಿ ಪಾತ್ರದ ಮೂಲಕ ರಚನಾ ಖ್ಯಾತಿಯಾಗಿದ್ದರು. ಮೂರು ವರ್ಷಗಳಿಂದ ರೇಡಿಯೋ ಜಾಕಿ ಕೆಲಸ ಬಿಟ್ಟಿದ್ದರು. ರೇಡಿಯೋ ಮಿರ್ಚಿಯಲ್ಲಿ ಅಪಾರ ಕೇಳುಗರನ್ನು ತನ್ನ ಮಾತಿನ ಮೂಲಕ ರಂಜಿಸಿದ ರಚನಾ ಅವರ ಹಠಾತ್ ನಿಧನ ಅಭಿಮಾನಿಗಳಲ್ಲಿ ಆಘಾತ ಮೂಡಿಸಿದೆ. ರಚನಾ ಅವರ ಆಸೆಯಂತೆ ಅವರ ಕುಟುಂಬಸ್ಥರು ಆಕೆಯ ದೇಹದ ಅಂಗಾಂಗ ದಾನಕ್ಕೆ ಮುಂದಾಗಿದ್ದು, ಆ ಮೂಲಕ ಆರ್ ಜೆ ರಚನಾ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ. ಕುಟುಂಬಸ್ಥರು ರಚನಾ ಅವರ ಅಂಗಾಂಗವನ್ನು ದಾನ ಮಾಡಿದ್ದಾರೆ.

# ಉದ್ಯೋಗ ವಂಚನೆ ಬಗ್ಗೆ ಐಟಿ ಇಲಾಖೆ ಎಚ್ಚರಿಕೆ

ನವದೆಹಲಿ ಫೆ. 22- ಉದ್ಯೋಗ ನೀಡುವುದಾಗಿ ವಂಚನೆ ಮಾಡುತ್ತಿರುವ ಬಗ್ಗೆ ಎಚ್ಚರಿಕೆ ನೀಡಿರುವ ಆದಾಯ ತೆರಿಗೆ ಇಲಾಖೆ, ಅಧಿಕೃತ ಎಸ್.ಎಸ್.ಸಿ. ಇಲ್ಲವೇ ಇಲಾಖೆಯ ವೆಬ್ ತಾಣಗಳ ಜಾಹೀರಾತು ಗಳನ್ನು ಮಾತ್ರ ಪರಿಗಣಿಸಬೇಕೆಂದು ತಿಳಿಸಿದೆ. ನಕಲಿ ನೇಮಕಾತಿ ಪತ್ರಗಳನ್ನು ನೀಡುವ ವಂಚಕರ ಬಗ್ಗೆ ಸಾರ್ವಜನಿಕರು ಎಚ್ಚರವಾಗಿರಬೇಕು ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

# ಹಾಲಮ್ಮ ದೇವಿ ಜಾತ್ರೆ : ವನದೇವಿಗೆ 12 ಕೆ.ಜಿ. ಬೆಳ್ಳಿ ಅರ್ಪಿಸಲು ಭಕ್ತರ ಸಿದ್ದತೆ

ಹರಪನಹಳ್ಳಿ, ಫೆ. 22- ತಾಲ್ಲೂಕಿನ ಐತಿಹಾಸಿಕ ಶಕ್ತಿ ಸ್ಥಳ ಉಚ್ಚಂಗಿದುರ್ಗದ ಕೆಳ ಭಾಗದ ವಿಶಾಲವಾದ ಪ್ರದೇಶದಲ್ಲಿ ಹರಡಿ ಕೊಂಡಿರುವ ವನದೇವತೆ ಶ್ರೀ ತೋಪಿನ ಹಾಲಮ್ಮ ದೇವಿಯ ಜಾತ್ರಾ ಮಹೋತ್ಸವ ಬರುವ ಏಪ್ರಿಲ್ 1ರಂದು ಆರಂಭವಾಗಲಿದ್ದು, ಭರದ ಸಿದ್ಧತೆಗಳು ನಡೆಯುತ್ತಿವೆ.

ಮುಖ್ಯರಸ್ತೆ ಹಾಗೂ ದುರ್ಗದ ಹಾದಿಗಳೆರಡನ್ನೂ ಕಾಂಕ್ರೀಟ್ ರಸ್ತೆಗಳನ್ನಾಗಿಸುತ್ತಿದ್ದು, ಬಸ್ ನಿಲ್ದಾಣ ಮತ್ತು ರಾಜಬೀದಿಯ ಆರಂಭದಲ್ಲಿ ಆಕರ್ಷಕ ಸ್ವಾಗತ ಫಲಕ ನಿರ್ಮಿಸುವ ಕಾರ್ಯ ತೀವ್ರ ಗತಿಯಲ್ಲಿ ಸಾಗಿದೆ. ಜಗಳೂರು ಶಾಸಕ ರಾಮಚಂದ್ರಪ್ಪ ಅವರು ಹೆಚ್ಚಿನ ಆಸಕ್ತಿ ವಹಿಸಿದ್ದು, ತಮ್ಮ ಶಾಸಕರ ಅನುದಾನದಲ್ಲಿ ಮೂರು ಕೋಟಿಗೂ ಹೆಚ್ಚಿನ ಹಣ ಬಿಡುಗಡೆ ಮಾಡಿಸಿದ್ದಾರೆ ಎಂದು ಗ್ರಾಮ ಪಂಚಾಯತಿ ಸದಸ್ಯ ಕೆಂಚಪ್ಪ ವಿವರಿಸಿದರು.

ದಾವಣಗೆರೆ ನಗರಸಭಾ ವ್ಯಾಯಾಮ ಶಾಲೆಯ ತರಬೇತುದಾರ, ಹಿರಿಯ ಕೋಚ್ ಎಂ.ದುಗ್ಗಪ್ಪ ಅವರು ಮಾತನಾಡಿ, ದೇವಿಯ ಮುಖ ಕವಚ ಸೇರಿದಂತೆ ಆಭರಣಗಳು ಹಾಗೂ ಪೂಜಾ ಪರಿಕರಗಳನ್ನು ಸುಮಾರು ಹನ್ನೆರಡು ಕಿಲೋ ಬೆಳ್ಳಿಯಲ್ಲಿ ಮಾಡಿಸುವ ಕಾರ್ಯವೂ ಭರದಿಂದ ಸಾಗುತ್ತಿದ್ದು, ಈ ಮಹಾನ್ ಕಾರ್ಯಕ್ಕೆ ದೇವಿಯ ಭಕ್ತಾದಿಗಳು ಪೂರ್ಣ ಪ್ರಮಾಣದಲ್ಲಿ ನೆರವು ನೀಡುತ್ತಿದ್ದಾರೆ. ಮತ್ತಷ್ಟು ಬೆಳ್ಳಿ ನೀಡುವ ಜೊತೆಗೆ ಅಭಿವೃದ್ಧಿ ಯುಕ್ತ ಸೇವಾ ಕಾರ್ಯಗಳಿಗೆ ಸಹಾಯ ಹಸ್ತ ಚಾಚುವ ಭಕ್ತಾದಿಗಳು ಆಡಳಿತ ಮಂಡಳಿಯನ್ನು ಸಂಪರ್ಕಿಸಬೇಕೆಂದು ಮನವಿ ಮಾಡಿದರು.

ಈಗಾಗಲೇ ನಿಧಾನವಾಗಿ ಜಾತ್ರಾ ಮಹೋತ್ಸವದ ಕಾರ್ಯಗಳು ಕಳೆಗಟ್ಟುತ್ತಿದ್ದು, ಪ್ರತಿ ಮಂಗಳವಾರ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ದೂರದೂರುಗಳಿಂದ ವಾಹನಗಳಲ್ಲಿ ದೇವಿ ಪೂಜೆಗೆಂದು ಸಂಸಾರ ಸಹಿತ ಬರುತ್ತಿದ್ದು ಮರಗಳ ನೆರಳು, ಯಾತ್ರಿ ಸ್ಥಳದ ಮುಂಭಾಗ ಮೊದಲಾದೆಡೆಯಲ್ಲಿ ಡೇರೆ ಹಾಕಿ ಭರ್ಜರಿಯಾದ ಸಿಹಿ / ಖಾರದ ಅಡುಗೆ ತಯಾರಿಯಲ್ಲಿದ್ದಾರೆ. ಅವರುಗಳಿಗೆ ಕುಡಿಯುವ ನೀರು ಇತ್ಯಾದಿ ಅನುಕೂಲ ಕಲ್ಪಿಸಲಾಗುತ್ತಿದೆ.ಜಾತ್ರೆಗೆ ಲಕ್ಷಾಂತರ ಜನರು ರಾಜ್ಯ - ಪರ ರಾಜ್ಯಗಳಿಂದ ಬರಲಿದ್ದಾರೆ ಎಂದೂ ಎಂ.ದುಗ್ಗಪ್ಪ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಹಳೇಬೀಡು ರಾಮಪ್ರಸಾದ್ , ಕೆಂಚಪ್ಪ , ಅರವಿಂದ್ ಹಾಗೂ ಹರೀಶ್ ಹಾಜರಿದ್ದರು.



MEGPLY™
Trusted Ply For Strong Future
CLASSIC MR 303
NEEM BWR 303
GOLD 710
CLUB 710
WPC
PREMIUM QUALITY Best CHOICE PREMIUM QUALITY
Authorised Dist:
Samruddhi Ply & Hardware
Hadadi Road, Opp Vani Rice Mill
Davangere - 577004
Ph: 9980339333, 7676055550

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte